
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ರಾಷ್ಟ್ರೀಯ ದಾಖಲೆಯ ಒಡೆಯ ತೇಜಸ್ ಶಿರ್ಸೆ ಅವರು ಗ್ಲಾಸ್ಗೊದಲ್ಲಿ ನಡೆದ ಪುರುಷರ 110 ಮೀ. ಹರ್ಡಲ್ಸ್‌ನಲ್ಲಿ ಫೈನಲ್ ಸುತ್ತು ಪ್ರವೇಶಿಸಿದರು. ಈ ಸಾಧನೆ ಮಾಡಿದ ಭಾರತದ ಮೊದಲ ಅಥ್ಲೀಟ್ ಎಂಬ ಹಿರಿಮೆಗೂ ಪಾತ್ರರಾದರು...

29 ಜುಲೈ, 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 138 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

# ಓಂ ಶಾಂತಿಃ

## ನೀವು ನಮ್ಮ ಪಾಲಿಗೆ ನೆನಪಷ್ಟೇ ಅಲ್ಲ,
## ನಿತ್ಯಸ್ಮರಣೆಯ ಅಮ್ಮ ಅನ್ನಪೂರ್ಣೆ

ನ ಜಾಯತೇ ಮ್ರಿಯತೇ ವಾ ಕದಾಚಿನ್
ನಾಯಂ ಭೂತ್ವಾ ಭವಿತಾ ವಾ ನ ಭೂಯಃ ।
ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ
ನ ಹನ್ಯತೇ ಹನ್ಯಮಾನೇ ಶರೀರೇ ॥
**–ಭಗವದ್ಗೀತೆ**



**ಶ್ಲೋಕದ ಅರ್ಥ:**
ಆತ್ಮಕ್ಕೆ ಹುಟ್ಟು, ಸಾವು ಇರುವುದಿಲ್ಲ. ಇದು ಹುಟ್ಟಿಲ್ಲದ, ಶಾಶ್ವತ, ಸನಾತನ ಮತ್ತು ಎಂದೆಂದಿಗೂ ಅಳಿಯದ ಅಮರತ್ವವಾಗಿದೆ. ದೇಹವು ನಾಶವಾದರೂ ಆತ್ಮವು ಎಂದಿಗೂ ನಾಶವಾಗುವುದಿಲ್ಲ.

# ಶ್ರೀಮತಿ ಚನ್ನಮ್ಮ ದೇವೇಗೌಡರು

1937-2026

# ಉತ್ತರ ಕ್ರಿಯಾದಿ ಕಾರ್ಯಕ್ರಮ

| | | |
|---|---|---|
| 30-07-2026<br>ಗುರುವಾರ | ಸಮಯ<br>ಬೆಳಗ್ಗೆ 11:00 ಗಂಟೆಗೆ | ಸ್ಥಳ: ಶ್ರೀಮತಿ ಚನ್ನಮ್ಮ ಅವರ ಪವಿತ್ರ ಸಮಾಧಿ, ಮಾವಿನಕೆರೆ ಶ್ರೀ ರಂಗನಾಥಸ್ವಾಮಿ ಬೆಟ್ಟದ ತಪ್ಪಲು, ಹೊಳೆನರಸೀಪುರ ತಾಲೂಕು, ಹಾಸನ ಜಿಲ್ಲೆ |

Location QR Code

ಶೋಕತಪ್ತರು: **ಶ್ರೀ ಹೆಚ್.ಡಿ.ದೇವೇಗೌಡರು** ಮತ್ತು ಕುಟುಂಬವರ್ಗ, ಅಭಿಮಾನಿಗಳು

ಸರ್ವರಿಗೂ ಇದು ನಮ್ಮ ವೈಯಕ್ತಿಕ ಆಹ್ವಾನ. ದಯಮಾಡಿ ಎಲ್ಲರೂ ಆಗಮಿಸಿ ಅಗಲಿದ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿಸುತ್ತೇವೆ.

ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಸ್ಕಾಟ್ಲೆಂಡ್‌ನ ಗ್ಲಾಸ್ಗೊದಲ್ಲಿ ನಡೆಯುತ್ತಿರುವ ಕಾಮನ್ ವೆಲ್ತ್ ಕ್ರೀಡಾಕೂಟದ ಶಾಟ್‌ಪುಟ್‌ನಲ್ಲಿ ಭಾರತದ ಪ್ಯಾರ ಅಥ್ಲೀಟ್ ಮೈಸೂರಿನ ಕೆ.ಎಸ್.ಶಿಲ್ಪಾ ಕಂಚಿನ ಪದಕ ಗೆದ್ದು ಸಂಭ್ರಮಿಸಿದರು.

29 ಜುಲೈ, 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ :138 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಕಾಮನ್‌ವೆಲ್ತ್ ಕ್ರೀಡೆ : ಕಂಚಿನ ಪದಕ ಗೆದ್ದ ಕನ್ನಡತಿ ಶಿಲ್ಪಾ » 2



ಆಗಸ್ಟ್ 13 ರಿಂದ ರಾಜ್ಯ ವಿಧಾನಮಂಡಲ ಮುಂಗಾರು ಅಧಿವೇಶನ



ಆಲೂರಿನಲ್ಲಿ ಶೇ.100 ರಷ್ಟು ಜೋಳದ ಬೆಳೆ ಹಾನಿ » 4

# ತಮಿಳುನಾಡಿಗೆ ನೀರು ಹರಿಸಲು ಆದೇಶ

- 3,500 ಕ್ಯೂಸೆಕ್ ನಂತೆ ಒಟ್ಟು 4.56 ಟಿಎಂಸಿ ಬಿಡುಗಡೆಗೆ ಶಿಫಾರಸ್ಸು
- ಬರದ ಮಧ್ಯೆ ರಾಜ್ಯಕ್ಕೆ ಆಘಾತ

• ಪ್ರಜೋದಯ ವರದಿ

**ಬೆಂಗಳೂರು :** ಮುಂಗಾರು ಮಳೆ ಕೈ ಕೊಟ್ಟಿರುವುದರಿಂದ ರಾಜ್ಯದ ಜಲಾಶಯಗಳು ಸಹ ಖಾಲಿಯಾಗಿದ್ದರೂ ಕಾವೇರಿ ನದಿ ನೀರನ್ನು ತಮಿಳುನಾಡಿಗೆ ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಮಂಡಳಿ ಮಂಗಳವಾರ ಶಿಫಾರಸು ಮಾಡಿದೆ.

ನವದೆಹಲಿಯಲ್ಲಿ ನಡೆದ ಸಿಡಬ್ಲ್ಯೂಆರ್‌ಸಿ ಸಭೆಯಲ್ಲಿ ತಮಿಳುನಾಡಿಗೆ ಮುಂದಿನ 15 ದಿನಗಳ ಕಾಲ ಪ್ರತಿದಿನ 3,500 ಕ್ಯೂಸೆಕ್ ನೀರು ಹರಿಸುವಂತೆ ಶಿಫಾರಸ್ಸು ಮಾಡಿರುವುದರಿಂದ ತಮಿಳುನಾಡಿಗೆ ಒಟ್ಟು 4.56 ಟಿಎಂಸಿ ನೀರನ್ನು ಹರಿಸ ಬೇಕಾದ ಅನಿವಾರ್ಯತೆ ಎದುರಾಗಿದೆ.

ರಾಜ್ಯದ ಜಲಾಶಯಗಳಲ್ಲಿ ಈಗಾಗಲೇ ಕುಡಿಯುವ ನೀರಿಗೆ ಅಭಾವವಿರುವಾಗ, ಈ ಪ್ರಮಾಣದ ನೀರನ್ನು ಹರಿಸುವುದು ಕೆಆರ್‌ಎಸ್, ಕಬಿನಿ, ಹಾರಂಗಿ ಹಾಗು ಹೇಮಾವತಿ ಜಲಾಶಯಗಳ ಸಂಗ್ರಹದ ಮೇಲೆ ತೀವ್ರ ಪರಿಣಾಮ ಬೀರಲಿದೆ.

ಸಭೆಯಲ್ಲಿ ಕರ್ನಾಟಕದ ಪರವಾಗಿ ವಾದ ಮಂಡಿಸಿದ ಅಧಿಕಾರಿಗಳು, ರಾಜ್ಯದ ಜಲಾಶಯಗಳಲ್ಲಿ ಸಾಕಷ್ಟು ಪ್ರಮಾಣದ ನೀರಿಲ್ಲ. ಸ್ಥಳೀಯ ರೈತರ ಬೆಳೆಗಳಿಗೆ ಹಾಗು ನಗರಗಳ ಕುಡಿಯುವ ನೀರಿನ ಅಗತ್ಯಕ್ಕೆ ಮೊದಲ ಆದ್ಯತೆ ನೀಡಬೇಕಾಗಿದೆ. ಹೀಗಾಗಿ ಪ್ರಸ್ತುತ ಸನ್ನಿವೇಶದಲ್ಲಿ ತಮಿಳುನಾಡಿಗೆ ಹೆಚ್ಚುವರಿ ನೀರು ಹರಿಸಲು ಸಾಧ್ಯವಿಲ್ಲವೆಂದು ಪ್ರಬಲವಾಗಿ ಮನವರಿಕೆ ಮಾಡಲು ಯತ್ನಿಸಿದರು. ಆದರೆ, ಕರ್ನಾಟಕದ ವಾದವನ್ನು ಸಮಿತಿಯು ಅಲ್ಲಗಳೆಯಿತು.

ಸಿಡಬ್ಲ್ಯೂಆರ್‌ಸಿ ನೀಡಿರುವ ಈ ಶಿಫಾರಸ್ಸನ್ನು ಪ್ರಶ್ನಿಸಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ (ಸಿಡಬ್ಲ್ಯೂಎಮ್‌ಎ) ಮೇಲ್ಮನವಿ ಸಲ್ಲಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಈ ಬಗ್ಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಾನೂನು ತಜ್ಞರು ಮತ್ತು ಜಲ ಸಂಪನ್ಮೂಲ ಇಲಾಖೆಯ ಉನ್ನತಾಧಿಕಾರಿಗಳೊಂದಿಗೆ ಸರ್ಕಾರ ತುರ್ತು ಸಮಾಲೋಚನೆ ನಡೆಸಲಿದೆ ಎಂದು ಸಚಿವ ರಾಮಲಿಂಗಾ ರೆಡ್ಡಿ ಅವರು ಹೇಳಿದ್ದಾರೆ. ಸಿಡಬ್ಲ್ಯೂಆರ್‌ಸಿ ಶಿಫಾರಸ್ಸನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಲ್ಲಿ ಪ್ರಶ್ನೆ ಮಾಡ ಬಹುದು. ಆದರೂ ನಿರ್ವಹಣಾ ಪ್ರಾಧಿಕಾರದ ನಿರ್ಧಾರ ಅಂತಿಮವಾಗಿರುತ್ತದೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಸೂಚಿಸಿದರೆ ಕರ್ನಾಟಕ ನೀರು ಹರಿಸಲೇ ಬೇಕಾಗುತ್ತದೆ.



### 14 ವರ್ಷಗಳ ಬಳಿಕ ಮತ್ತೆ ಮಾತುಕತೆ

ಕಾವೇರಿ ನದಿ ನೀರನ್ನು ತಮಿಳು ನಾಡಿಗೆ ಹರಿಸುವ ವಿಚಾರವಾಗಿ ಆ.3 ರಂದು ಬೆಂಗಳೂರಿನ ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಮಹತ್ವದ ಸಭೆ ನಡೆಸಲು ನಿರ್ಧರಿಸ ಲಾಗಿದ್ದು, 14 ವರ್ಷಗಳ ಬಳಿಕ ಈ ಸಭೆ ನಡೆಯುತ್ತಿದೆ. ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಭಾಗಿಯಾಗಲಿದ್ದಾರೆ. ಈ ಹಿನ್ನಲೆ ಕರ್ನಾಟಕ ಸರ್ಕಾರ ಎಲ್ಲಾ ಸಿದ್ಧತೆ ನಡೆಸುತ್ತಿದೆ. 14 ವರ್ಷಗಳ ಹಿಂದಿನ ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ ಹಾಗು ಕರ್ನಾಟಕದ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರೊಂದಿಗೆ ಸಭೆ ನಡೆದಿತ್ತು.

### ರೈತರಿಂದ ಆಕ್ರೋಶ: ಪ್ರತಿಭಟನೆ ಎಚ್ಚರಿಕೆ

ದೆಹಲಿ ಸಿಡಬ್ಲ್ಯೂಆರ್‌ಸಿ ಸಭೆಯಲ್ಲಿ ತಮಿಳುನಾಡಿಗೆ ಪ್ರತಿ ನಿತ್ಯ 3500 ಕ್ಯೂಸೆಕ್ ನೀರು ಹರಿಸುವ ಆದೇಶ ಖಂಡಿಸಿ ಕಾವೇರಿ ಅಚ್ಚುಕಟ್ಟು ಪ್ರದೇಶದ ರೈತರು ಪ್ರತಿಭಟನೆ ಆರಂಭಿಸಿದ್ದಾರೆ. ಮುಂಗಾರು ಕೈಕೊಟ್ಟು, ಕುಡಿ ಯುವ ನೀರಿಗೂ ತೊಂದರೆಯಾಗಿ ರುವಾಗ ತಮಿಳುನಾಡಿಗೆ ನೀರು ಹರಿಸಿದರೆ 1991ರ ಮಾದರಿಯ ಕಾವೇರಿ ಸಂಘರ್ಷ ಎದುರಾಗಲಿದೆ ಎಂದು ಕನ್ನಡ ಪರ ಹೋರಾಟ ಗಾರರು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

# ನಾಳೆ ಚನ್ನಮ್ಮನವರ ಉತ್ತರ ಕ್ರಿಯಾದಿ ಕ್ರಿಯೆ

## ಅಂತಿಮ ಸಿದ್ಧತೆ ಪರಿಶೀಲಿಸಿದ ಹೆಚ್.ಡಿ.ಕುಮಾರಸ್ವಾಮಿ, ರೇವಣ್ಣ

• ಪ್ರಜೋದಯ ವರದಿ

**ಹಾಸನ:** ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಶ್ರೀಮತಿ ಚನ್ನಮ್ಮ ಅವರ 11ನೇ ದಿನದ ಉತ್ತರ ಕ್ರಿಯಾದಿ ಕ್ರಿಯೆ ಜು.30ರಂದು ಹೊಳೆನರಸೀಪುರ ತಾಲ್ಲೂಕಿನ ಮಾವಿನಕೆರೆ ಶ್ರೀ ರಂಗನಾಥಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ನಡೆಯಲಿದ್ದು, ಮಂಗಳವಾರ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಸಿದ್ಧತೆ ಪರಿಶೀಲನೆ ನಡೆಸಿದರು.

ಉತ್ತರ ಕ್ರಿಯಾದಿ ಕಾರ್ಯದ ಪೂರ್ವ ಸಿದ್ಧತೆ ಕಾರ್ಯಗಳು ಭರದಿಂದ ಸಾಗಿವೆ. ಲಕ್ಷಕ್ಕೂ ಅಧಿಕ ಮಂದಿ ಆಗಮಿಸುವ ನಿರೀಕ್ಷೆ ಇದ್ದು, ಪಾರ್ಕಿಂಗ್ ವ್ಯವಸ್ಥೆ, ಊಟಕ್ಕಾಗಿ ಪ್ರತ್ಯೇಕ ಆಸನ ಮತ್ತು ಕೌಂಟರ್ ತೆರೆಯಲಾಗಿದೆ. ಊಟ ಸಿದ್ಧ ಮಾಡುವ ಜವಾಬ್ದಾರಿಯನ್ನು ಮೈಯ್ಯಾಸ್ ಗ್ರೂಪ್‌ನವರಿಗೆ ವಹಿಸಲಾಗಿದೆ. ಸುಮಾರು ಆರು ಬಗೆಯ ಸಿಹಿ ತಿಂಡಿ ಸೇರಿ ಅಡುಗೆ ತಯಾರಾಗುತ್ತಿದೆ. ಸಾಮಾನ್ಯರು, ಗಣ್ಯರು ಸೇರಿ ಪ್ರತ್ಯೇಕವಾಗಿ 16 ಕೌಂಟರ್ ತೆರಯಲಾಗಿದೆ. 1,500 ಅಡುಗೆ ಭಟ್ಟರು ತರೇಹೇವಾರಿ ಅಡುಗೆ ತಯಾರು ಮಾಡಲಿದ್ದಾರೆ. ಕಾರ್ಯ ನಡೆಯುವ ಒಂದು ಕಿಮೀ ದೂರದಿಂದಲೇ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ.

ವಿಐಪಿ ಮಾರ್ಗ, ಪಾರ್ಕಿಂಗ್ ಸ್ಥಳ, ಸಾರ್ವಜನಿಕ ಮಾರ್ಗ, ಊಟದ ಸ್ಥಳಕ್ಕೆ ದಾರಿ, ಎಡಕ್ಕೆ ಪಾರ್ಕಿಂಗ್, ಮಹಿಳೆಯರ ಊಟದ ಸ್ಥಳಕ್ಕೆ ದಾರಿ, ಬೈಕ್ ಹಾಗು ಕಾರು ನಿಲುಗಡೆಗೆ ಪ್ರತ್ಯೇಕ ಮಾರ್ಗ, ವಿಐಪಿ, ಮಹಿಳೆಯರು ಹಾಗು ಸಾರ್ವಜನಿಕರ ಊಟಕ್ಕೆ ಪ್ರತ್ಯೇಕ ಸ್ಥಳ ನಿಗದಿ ಮಾಡಲಾಗಿದೆ. ಪಾರ್ಕಿಂಗ್‌ಗಾಗಿ ಹಾಸನ ಕಡೆಯಿಂದ

» ನಾಲ್ಕನೇ ಪುಟದಲ್ಲಿ



> ತಾಯಿಯವರ ಉತ್ತರ ಕ್ರಿಯಾದಿ ಕ್ರಿಯೆ ಅಚ್ಚುಕಟ್ಟಾಗಿ ನಡೆಯಬೇಕೆಂದು ಎಚ್ಚರಿಕೆ ವಹಿಸಲಾಗಿದೆ. ಎಷ್ಟೇ ಜನರು ಬಂದರೂ ಅನ್ನ ಸಂತರ್ಪಣೆಗೆ ವ್ಯವಸ್ಥೆ ಮಾಡಲಾಗಿದೆ. ಅವರ ಅಭಿಮಾನಿಗಳು ಶಾಂತ ರೀತಿಯಲ್ಲಿ ಸಹಕರಿಸುವ ಮೂಲಕ ಅಮ್ಮನವರ ಆತ್ಮಕ್ಕೆ ಶಾಂತಿ ಕೋರಬೇಕೆಂದು ಮನವಿ ಮಾಡುತ್ತೇನೆ.
>
> –ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

# ಆರೋಗ್ಯ ಇಲಾಖೆ ಸಹ ನಿರ್ದೇಶಕರಿಗೆ ದೂರುಗಳ ಸುರಿಮಳೆ

• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಮಂಗಳವಾರ ಭೇಟಿ ನೀಡಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಮೈಸೂರು ವಿಭಾಗೀಯ ಸಹ ನಿರ್ದೇಶಕ ಡಾ|| ಪ್ರಕಾಶ್ ಅವರಿಗೆ ಸಾರ್ವಜನಿಕರು ಹತ್ತಾರು ಸಮಸ್ಯೆ ಹೇಳಿಕೊಂಡರು.

ಇದೆ ವೇಳೆ ವೈದ್ಯರ ಕೊರತೆ ಕುರಿತು ವ್ಯಕ್ತಿಯೊಬ್ಬರು ಪ್ರಸ್ತಾಪಿಸಿದಾಗ ನೀವೇ ವೈದ್ಯರ ಕರೆದುಕೊಂಡು ಬನ್ನಿ ಎಂದು ಡಾ||ಪ್ರಕಾಶ್ ಅವರು ಉತ್ತರಿಸಿದ್ದು ಆಕ್ರೋಶಕ್ಕೂ ಕಾರಣವಾಯಿತು. ಮಕ್ಕಳ ತಜ್ಞ ವೈದ್ಯರಿಲ್ಲದೆ ಹಲವು ತಿಂಗಳಿನಿಂದ ರೋಗಿಗಳು ಸಂಕಷ್ಟ ಅನುಭವಿಸುತ್ತಿದ್ದಾರೆ. ಮಕ್ಕಳನ್ನು ಚಿಕಿತ್ಸೆಗಾಗಿ ದೂರದ ಊರುಗಳಿಗೆ ಕರೆದೊಯ್ಯಬೇಕಾಗಿದೆ ಎಂದು ಸಾರ್ವಜನಿಕರು ಅಳಲು ತೋಡಿಕೊಂಡರು.



ಆಸ್ಪತ್ರೆಯಲ್ಲಿ ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞ ವೈದ್ಯರಿದ್ದು, ಸದಾ ಕಾಲ ರಜೆಯಲ್ಲೇ ಇರುತ್ತಾರೆ. ತಿಂಗಳಿಗೆ 2 ರಿಂದ 3 ಹೆರಿಗೆಗಳು ನಡೆಯುತ್ತಿವೆ. ಹೆರಿಗೆ ವಿಭಾಗದಲ್ಲಿ ಮಾತ್ರ 5 ಸಿಬ್ಬಂದಿ ಇರುತ್ತಾರೆ. ಹೆರಿಗೆಗಾಗಿ ಬರುವವರನ್ನು ಹಾಸನ, ಹೊಳೆನರಸೀಪುರದ ಆಸ್ಪತ್ರೆಗೆ ಕಳುಹಿಸಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾತ್ರಿ ಪಾಳಿಯಲ್ಲಿ ತಜ್ಞ ವೈದ್ಯರು, ಪ್ರಯೋಗಾಲಯ ಸಿಬ್ಬಂದಿ ಇರುವುದಿಲ್ಲ. ಈ ಸಮಸ್ಯೆಗೆ ಸೂಕ್ತ ವ್ಯವಸ್ಥೆ ಮಾಡಿಕೊಡುವಂತೆ ಮನವಿ ಮಾಡಿದಾಗ ಇಲಾಖೆ ಮೇಲಾಧಿಕಾರಿ, ಸರ್ಕಾರಕ್ಕೆ ವಿಷಯ ಮುಟ್ಟಿಸಿ ಸಮಸ್ಯೆ ಪರಿಹರಿಸಲಾಗುವುದೆಂದು ಡಾ|| ಪ್ರಕಾಶ್ ಅವರು ಭರವಸೆ ನೀಡಿದರು.

ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ|| ಸ್ವಾಮೀಗೌಡ ಅವರು ಒಮ್ಮೆಯೂ ಹೊರ, ಒಳ ರೋಗಿಗಳನ್ನು ತಪಾಸಣೆ ಮಾಡುತ್ತಿಲ್ಲ. ವೈದ್ಯರ ಕೊರತೆ ಹಿನ್ನಲೆ ಅವರು ಕೂಡ ನಿಗದಿತ ಕೊಠಡಿಯಲ್ಲಿ ಕಾರ್ಯನಿರ್ವಹಿಸಿ ಜನರಿಗೆ ಚಿಕಿತ್ಸೆ ಕೊಡಬೇಕೆಂದು ಒತ್ತಾಯಿಸಿದರು.

ಪ್ರತಿಕ್ರಿಯಿಸಿದ ಡಾ|| ಪ್ರಕಾಶ್ ಅವರು, ಆಸ್ಪತ್ರೆಯಲ್ಲಿನ ವೈದ್ಯರ ಕೊರತೆ, ಅಗತ್ಯ ವೈದ್ಯಕೀಯ ಸೌಲಭ್ಯಗಳ ಅಭಾವ ಹಾಗು ರೋಗಿಗಳ ಸಮಸ್ಯೆಗಳ ಬಗ್ಗೆ ರಾಜ್ಯ ಸರ್ಕಾರದ ಗಮನಕ್ಕೆ ತರಲಾಗುವುದು ಎಂದರು.

# ಜನಸಂಖ್ಯೆಗೆ ಅನುಗುಣವಾಗಿ ಮೂಲಸೌಕರ್ಯ ಅತ್ಯಗತ್ಯ

## ಸಕಲೇಶಪುರದಲ್ಲಿ ಜಿಲ್ಲಾಧಿಕಾರಿ ಸಂಚಾರ | ಅಭಿವೃದ್ಧಿ ಕಾಮಗಾರಿ ಚರ್ಚೆ

• ಪ್ರಜೋದಯ ವರದಿ

**ಸಕಲೇಶಪುರ:** ವೇಗವಾಗಿ ಬೆಳೆಯುತ್ತಿರುವ ಪಟ್ಟಣದ ಜನಸಂಖ್ಯೆ ಹಾಗು ವಾಹನಗಳ ಸಂಖ್ಯೆಗೆ ಅನುಗುಣವಾಗಿ ಮೂಲಸೌಕರ್ಯ ಅಭಿವೃದ್ಧಿ ಪಡಿಸುವುದು ಅತ್ಯಗತ್ಯವೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಹೇಳಿದರು.

ಪಟ್ಟಣದ ತೇಜಸ್ವಿ ವೃತ್ತ, ಮಳಲಿ ಬೈಪಾಸ್, ಹಳೆ ಬಸ್ ನಿಲ್ದಾಣ, ಎಸ್‌ಬಿಐ ವೃತ್ತದ ಸಮೀಪ ಮಂಗಳವಾರ ನಿರ್ಮಾಣ ಹಂತದಲ್ಲಿರುವ ಫುಡ್ ಕೋರ್ಟ್ ಸ್ಥಳ, ಸುಭಾಷ್ ಕ್ರೀಡಾಂಗಣದ ಬಳಿಯ ತ್ಯಾಜ್ಯ ವಿಲೇವಾರಿ ಪ್ರದೇಶ ಸೇರಿ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2011ರಲ್ಲಿ ಸುಮಾರು 25 ಸಾವಿರ ಜನಸಂಖ್ಯೆ ಹೊಂದಿದ್ದ ಸಕಲೇಶಪುರದಲ್ಲಿ ಪ್ರಸ್ತುತ 35 ರಿಂದ 40 ಸಾವಿರಕ್ಕೂ ಅಧಿಕ ಜನಸಂಖ್ಯೆ ಇದೆ. ಆದರೆ ಬಸ್ ನಿಲ್ದಾಣ, ರಸ್ತೆ ಸೇರಿ ಬಹುತೇಕ ಮೂಲ ಸೌಕರ್ಯಗಳು ಎರಡು ದಶಕಗಳ ಹಿಂದಿನ ಅಗತ್ಯಕ್ಕೆ ಅನುಗುಣವಾಗಿ ನಿರ್ಮಾಣಗೊಂಡಿವೆ. ಮಲೆನಾಡಿನ ಪ್ರಮುಖ ಪ್ರವಾಸಿ ತಾಣವಾಗಿರುವ ಕಾರಣ ವಾಹನಗಳ ಓಡಾಟವೂ ಗಣನೀಯವಾಗಿ ಹೆಚ್ಚಿದ್ದು, ನಗರದಲ್ಲಿನ ಮೂಲ ಸೌಕರ್ಯಗಳ ಮೇಲಿನ ಒತ್ತಡ ಹೆಚ್ಚಾಗಿದೆ ಎಂದು ತಿಳಿಸಿದರು.



ಕೊಲ್ಲಹಳ್ಳಿ ಗ್ರಾಮದಿಂದ ಆನೆ ಮಹಲ್ ಗ್ರಾಮದವರೆಗೆ ರಸ್ತೆ ವಿಸ್ತರಣೆಗಿರುವ ಸಾಧಕ-ಬಾಧಕಗಳ ಕುರಿತು ಒಂದು ವಾರದೊಳಗೆ ಸಮಗ್ರ ವರದಿ ಸಲ್ಲಿಸುವಂತೆ ತಾಲ್ಲೂಕು ಆಡಳಿತಕ್ಕೆ ಸೂಚನೆ ನೀಡಲಾಗಿದೆ. ಬೈಪಾಸ್ ರಸ್ತೆ ಇದ್ದರೂ ಪಟ್ಟಣದೊಳಗಿನ ವಾಹನ ದಟ್ಟಣೆ ಕಡಿಮೆಯಾಗದಿರುವ ಹಿನ್ನಲೆಯಲ್ಲಿ ರಸ್ತೆ ವಿಸ್ತರಣೆ ಕುರಿತು ಕ್ರಮ ಕೈಗೊಳ್ಳಲಾಗುವುದೆಂದರು.

ಪಟ್ಟಣದ ಪ್ರಮುಖ ಸಂಚಾರ ಕೇಂದ್ರವಾಗಿರುವ ತೇಜಸ್ವಿ ವೃತ್ತದಲ್ಲಿ ಹಾಸನ, ಬೇಲೂರು ಹಾಗು ಮಂಗಳೂರು ರಸ್ತೆಗಳು ಸೇರುವುದರಿಂದ ವಾಹನ ದಟ್ಟಣೆ ಮತ್ತು ಅಪಘಾತಗಳ ಸಾಧ್ಯತೆ ಹೆಚ್ಚಿದೆ. ಆದ್ದರಿಂದ ವೃತ್ತದ ಅಗಲೀಕರಣ, ಹೈಮಾಸ್ಟ್ ದೀಪ, ಟ್ರಾಫಿಕ್ ಸಿಗ್ನಲ್, ದಿಕ್ಕು ಸೂಚನಾ ಫಲಕ, ಮಾಹಿತಿ ಫಲಕ, ವೇಗ ನಿಯಂತ್ರಕಗಳು ಸೇರಿ ಸಂಚಾರ ಸುರಕ್ಷತೆಗೆ ಅಗತ್ಯ ಸೌಲಭ್ಯಗಳನ್ನು ಒಳಗೊಂಡ ಸಮಗ್ರ ಯೋಜನೆರೂಪಿಸಲಾಗುವುದೆಂದರು.

ಮುಖ್ಯ ರಸ್ತೆಗಳಲ್ಲಿ ಪಾದಚಾರಿ ಮಾರ್ಗ, ಚರಂಡಿ, ಸುಸಜ್ಜಿತ ಪಾರ್ಕಿಂಗ್ ವ್ಯವಸ್ಥೆ, ಬಸ್ ಶೆಲ್ಟರ್ ಹಾಗು ಬೀದಿ ವ್ಯಾಪಾರಿಗಳಿಗೆ ಪ್ರತ್ಯೇಕ ಸ್ಥಳ ಕಲ್ಪಿಸುವ ಅಗತ್ಯವಿದ್ದು, ನಗರಾಭಿವೃದ್ಧಿ ಯೋಜನೆಯಲ್ಲಿ ಆದ್ಯತೆ ನೀಡಲಾಗುವುದು. 1988ರಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

» ನಾಲ್ಕನೇ ಪುಟದಲ್ಲಿ

# ಮಕ್ಕಳ ಜ್ಞಾನ ಸನಾತನ ಪರಂಪರೆಯೊಂದಿಗೆ ಬೆಸೆಯಲಿ

## ಜ್ಞಾನಾಂಕುರ ಕಾರ್ಯಕ್ರಮದಲ್ಲಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಕಿವಿಮಾತು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಕ್ಕಳ ಜ್ಞಾನದ ಆರಂಭವು ಸಂಸ್ಕಾರ ಮತ್ತು ಸನಾತನ ಪರಂಪರೆಯೊಂದಿಗೆ ಬೆಸೆದು ಕೊಳ್ಳಬೇಕೆಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಹೇಳಿದರು.

ಪಟ್ಟಣದ ಬಿಜಿಎಸ್ ಸಮುದಾಯ ಭವನದಲ್ಲಿ ಆದಿಚುಂಚನಗಿರಿ ಸಮೂಹ ಶಿಕ್ಷಣ ಸಂಸ್ಥೆಯ ಕಬ್ಬಳಿ, ಅಣತಿ ಹಾಗು ಚನ್ನರಾಯಪಟ್ಟಣದ ಶ್ರೀ ಬಾಲಗಂಗಾಧರನಾಥ ಆಂಗ್ಲ ಮಾಧ್ಯಮ ಶಾಲೆಯ ವತಿಯಿಂದ ಮಂಗಳವಾರ ನಡೆದ ಜ್ಞಾನಾಂಕುರ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಿ ಆಶೀರ್ವಚನ ನೀಡಿದ ಅವರು, ಸಂಸ್ಕಾರ ಪಡೆದ ಮಗು ಎಂದಿಗೂ ಸೋಲುವುದಿಲ್ಲ. ಮಕ್ಕಳ ಮನಸ್ಸಿನಲ್ಲಿ ಬಿತ್ತಿದ ಅಕ್ಷರ ಜ್ಞಾನವು ಭವಿಷ್ಯದಲ್ಲಿ ಉತ್ತಮ ಫಲ ಕೊಡುತ್ತದೆ. ಆದ್ದರಿಂದ ಧಾರ್ಮಿಕ, ಆಧ್ಯಾತ್ಮಿಕ ಮೌಲ್ಯಗಳೊಂದಿಗೆ ಅಕ್ಷರಾಭ್ಯಾಸ ಮಾಡಿಸುವ ಮೂಲಕ ಮಕ್ಕಳಲ್ಲಿ ಸಂಸ್ಕಾರಗಳನ್ನು ಬಿತ್ತುವ ಕಾರ್ಯವು ಶುಭಾರಂಭವಾಗಿದೆ. ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಶಾಲೆಯಲ್ಲಿ ಸಿಗುವ ಪಠ್ಯ ಶಿಕ್ಷಣದ ಜೊತೆಗೆ ಮನೆಯಲ್ಲಿ ಪಾಲಕರು ನೀಡುವ ಸಂಸ್ಕಾರದ ಶಿಕ್ಷಣವೂ ಬಹಳ ಮುಖ್ಯವೆಂದರು.



ಮನೆಯಲ್ಲಿ ಪೋಷಕರು, ಶಾಲೆಯಲ್ಲಿ ಶಿಕ್ಷಕರು ಎರಡೂ ಕಡೆ ಶಿಸ್ತುಬದ್ಧ ಮಾರ್ಗದರ್ಶನವೇ ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ಆಧಾರ. ಪೋಷಕರು ಹಣ-ಆಸ್ತಿಗಿಂತ ಮಕ್ಕಳನ್ನೇ ಶ್ರೇಷ್ಠ ಆಸ್ತಿಯನ್ನಾಗಿ ರೂಪಿಸಬೇಕು. ಮನೆಯೇ ಮೊದಲ ಪಾಠಶಾಲೆ. ತಾಯಿ-ತಂದೆಯೇ ಮೊದಲ ಗುರು. 23 ವರ್ಷದವರೆಗೆ ಮಕ್ಕಳ ಮೇಲೆ ಸೂಕ್ಷ್ಮ ನಿಗಾ ಇಟ್ಟು ಶಿಸ್ತು ಕಲಿಸಿದರೆ ಅವರು ಸ್ವಾವಲಂಬಿಗಳಾಗಿ, ಸತ್ಪ್ರಜೆಗಳಾಗುತ್ತಾರೆ. ಶಾಲೆಯಲ್ಲಿ

» ನಾಲ್ಕನೇ ಪುಟದಲ್ಲಿ

# ವಿಚಾರಣಾಧೀನ ಖೈದಿ ಸಾವು : ಕುಟುಂಬಸ್ಥರ ಅನುಮಾನ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಉಪಕಾರಾಗೃಹ ದಲ್ಲಿದ್ದ ವಿಚಾರಣಾಧೀನ ಖೈದಿಯೊಬ್ಬ ಚಿಕಿತ್ಸೆಗೆ ಸ್ಪಂದಿಸದೆ ಜಿಲ್ಲಾಸ್ಪತ್ರೆಯಲ್ಲಿ ಮೃತಪಟ್ಟಿದ್ದು, ಸಾವಿನ ಬಗ್ಗೆ ಕುಟುಂಬಸ್ಥರು ಅನುಮಾನ ವ್ಯಕ್ತಪಡಿಸಿದ್ದಾರೆ. ಚನ್ನರಾಯಪಟ್ಟಣ ತಾಲ್ಲೂಕಿನ ಹೊನ್ನಶೆಟ್ಟಿಹಳ್ಳಿ ಗ್ರಾಮದ ವಿಶ್ವನಾಥ್ (30) ಮೃತ ವಿಚಾರಣಾಧೀನ ಕೈದಿ.

ವಿಶ್ವನಾಥ್ ವಿರುದ್ಧ ಎರಡು ಪ್ರಕರಣಗಳು ದಾಖಲಾಗಿದ್ದವು. ರೌಡಿ ಶೀಟರ್ ಯಾಚೇನಹಳ್ಳಿ ಚೇತುಗೆ ಆಶ್ರಯ ನೀಡಿದ ಆರೋಪದಡಿ ಒಂದು ಪ್ರಕರಣ ದಾಖಲಾಗಿದ್ದರೆ,

» ನಾಲ್ಕನೇ ಪುಟದಲ್ಲಿ

# ವ್ಯಕ್ತಿ ಸಾವು : ವೈದ್ಯರ ನಿರ್ಲಕ್ಷ್ಯ ಆರೋಪ

## ಆಸ್ಪತ್ರೆ ಎದುರು ಸಂಬಂಧಿಕರ ಆಕ್ರೋಶ

• ಪ್ರಜೋದಯ ವರದಿ

**ಹಾಸನ:** ವೈದ್ಯರ ನಿರ್ಲಕ್ಷ್ಯದಿಂದಲೇ ರೋಗಿ ಮೃತಪಟ್ಟಿದ್ದಾರೆಂದು ಆರೋಪಿಸಿ ಮೃತರ ಸಂಬಂಧಿಕರು ನಗರದ ಸಂಪಿಗೆ ರಸ್ತೆಯಲ್ಲಿರುವ ಮಂಗಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದ್ದಾರೆ. ತಾಲ್ಲೂಕಿನ ಸಂಕೇನಹಳ್ಳಿ ಗ್ರಾಮದ ನಾರಾಯಣ್ ಮೃತ ವ್ಯಕ್ತಿ.

ಅನಾರೋಗ್ಯದ ಹಿನ್ನಲೆ ನಾರಾಯಣ್ ಅವರನ್ನು ಮಂಗಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಯಶಸ್ವಿಯಾಗಿ ನಡೆಯುತ್ತಿದ್ದು, ಮಂಗಳವಾರ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗುವುದೆಂದು ವೈದ್ಯರು ಕುಟುಂಬ ಸದಸ್ಯರಿಗೆ ತಿಳಿಸಿದ್ದರು ಎನ್ನಲಾಗಿದೆ.



ಆದರೆ, ಬಳಿಕ ಹಠಾತ್‌ವಾಗಿ ನಾರಾಯಣ್ ಅವರು ಹೃದಯಾಘಾತದಿಂದ ಮೃತಪಟ್ಟಿದ್ದಾರೆಂದು ಆಸ್ಪತ್ರೆ ಸಿಬ್ಬಂದಿ ಮಾಹಿತಿ ನೀಡಿದ್ದರಿಂದ ಕುಟುಂಬಸ್ಥರು ಆಘಾತಕ್ಕೊಳಗಾದರು.

ನಾರಾಯಣ್ ಅವರ ಸಾವಿಗೆ ವೈದ್ಯರ ನಿರ್ಲಕ್ಷ್ಯವೇ ಕಾರಣವೆಂದು ಆರೋಪಿಸಿದ ಸಂಬಂಧಿಕರು, ಆಸ್ಪತ್ರೆ ಆಡಳಿತ ಮಂಡಳಿಯಿಂದ ಸ್ಪಷ್ಟನೆ ಕೇಳಿದರೂ ವೈದ್ಯರು ಲಭ್ಯವಾಗಲಿಲ್ಲ ಎಂದು ದೂರಿದರು. ಅಲ್ಲದೆ, ಆಸ್ಪತ್ರೆಯ ವೈದ್ಯ ಡಾ.ರವಿ ಅವರು, ಬೇಕಿದ್ದರೆ ಮನೆಗೆ ಹೋಗಿ, ಇಲ್ಲಿ ಗಲಾಟೆ ಮಾಡಬೇಡಿ ಎಂದು ಉಡಾಫೆಯಾಗಿ ಉತ್ತರಿಸಿದ್ದಾರೆಂದು ಆರೋಪಿಸಿ ಆಕ್ರೋಶ ವ್ಯಕ್ತಪಡಿಸಿದರು. ಮೃತನ ಸಾವಿನ ಕುರಿತು ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡು ನ್ಯಾಯ ಒದಗಿಸಬೇಕೆಂದು ಸಂಬಂಧಿಕರು ಒತ್ತಾಯಿಸಿದರು. ಘಟನೆಯ ಮಾಹಿತಿ ತಿಳಿದು ಬಡಾವಣೆ ಪೊಲೀಸ್ ಠಾಣೆ ಪೊಲೀಸರು ಗಲಾಟೆಯನ್ನು ತಿಳಿಗೊಳಿಸಿದ್ದಾರೆ.

# ಟಿಸಿ ಸರ್ವಿಸ್ ಲೈನ್ ಅಳವಡಿಕೆಗೂ ಲಂಚದ ಆರೋಪ

• ಪ್ರಜೋದಯ ವರದಿ

**ಹಾಸನ:** ಹೆಂಡತಿಯ ಕಿವಿಯೋಲೆ ಅಡವಿಟ್ಟು ಗೊಬ್ಬರ ಹಾಕಿ ಬೆಳೆಸಿದ ಕಬ್ಬು ಹುಲುಸಾಗಿ ಬೆಳೆದಿದ್ದು, ಮಳೆ ಕೈ ಕೊಟ್ಟಿರುವುದರಿಂದ ನೀರಿಲ್ಲದೆ ಒಣಗುತ್ತಾ ಇದೆ. ನಮ್ಮ ಜಮೀನು ಪಕ್ಕದಲ್ಲೇ ಹೊಸ ಟಿಸಿ ಅಳವಡಿಸಿ ದ್ದಾರಾದರೂ ಸರ್ವಿಸ್ ಲೈನ್ ಕಲ್ಪಿಸಲು ಸೆಸ್ಕಾಂ ಅಧಿಕಾರಿಗಳು 25 ಸಾವಿರ ರೂ. ಲಂಚ ಕೇಳ್ತಿದ್ದಾರೆ. ಒಂದೊತ್ತಿನ ಊಟಕ್ಕೂ ಪರದಾಡುತ್ತಿರುವ ನಾನು ಲಂಚ ಎಲ್ಲಿಂದ ಕೊಡಲಿ.... ಶಾಂತಿಗ್ರಾಮ ಹೋಬಳಿ ಉಳುವಾರೆ ಗ್ರಾಮದ ವೃದ್ಧ ರೈತ ಟಿ.ಶ್ರೀನಿವಾಸ್ ಹೀಗೆ ಹೇಳುತ್ತಾ ಕಣ್ಣೀರು ಸುರಿಸಿದರು.

ಕಬ್ಬಿಗೆ ನೀರು ಹಾಯಿಸದಿದ್ದರೆ ಸಂಪೂರ್ಣ ಒಣಗಿ ಹೋಗುತ್ತದೆ. ಸೆಸ್ಕಾಂ ಅಧಿಕಾರಿಗಳ ಕಾಲಿಗೆ ಎಷ್ಟೇ ಬಾರಿ ಬಿದ್ದರೂ ಕನಿಕರ ತೋರುತ್ತಿಲ್ಲ. ನನಗೆ ನ್ಯಾಯ ದೊರಕಿಸಿಕೊಡಿ, ಇಲ್ಲವಾದರೆ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಅವರು ಬಿಕ್ಕಿ ಬಿಕ್ಕಿ ಅತ್ತರು.

ಪ್ರಜೋದಯ ಪತ್ರಿಕೆಯೊಂದಿಗೆ ಮಂಗಳವಾರ ಮಾತನಾಡಿದ ರೈತ ಶ್ರೀನಿವಾಸ್ ಅವರು, ಮರ್ಕುಲಿ ಸರ್ವೆ ನಂ.64ರಲ್ಲಿ ಎರಡೂವರೆ ಎಕರೆ ಜಮೀನಿದ್ದು, ಸಾಲ-ಸೋಲ ಮಾಡಿ ಕಬ್ಬು ಬೆಳೆದಿದ್ದೇನೆ. ಆರು ತಿಂಗಳ ಕಬ್ಬು ಚೆನ್ನಾಗಿ ಬೆಳೆದಿದೆ. ಮಳೆ ಕೈಕೊಟ್ಟ ಹಿನ್ನಲೆಯಲ್ಲಿ ಶೀಘ್ರವಾಗಿ ಬೆಳೆಗೆ ನೀರು ಹಾಯಿಸಲೇಬೇಕು. ಅಕ್ಕಪಕ್ಕದ ಜಮೀನಿನ ಎಂಟು ರೈತರು ಒಟ್ಟಿಗೆ ಸರ್ಕಾರಿ ಶುಲ್ಕ ಪಾವತಿಸಿ ಟಿಸಿ ಹಾಕಿಸಿಕೊಂಡಿದ್ದೇವೆಂದರು.



ಟಿಸಿಗೆ ಸರ್ವಿಸ್ ಕೊಡಲು ಸೆಸ್ಕಾಂ ಜೆಇ ಸತೀಶ್, ಲೈನ್‌ಮ್ಯಾನ್ ರೇವಂತ್ ಎಂಬುವವರು 25 ಸಾವಿರ ರೂ. ಲಂಚ ಕೇಳಿದರು. ಬೆಳೆ ಉಳಿದರೆ ಸಾಕೆಂದು ಹೇಗೋ ಕಷ್ಟಪಟ್ಟು 5 ಸಾವಿರ ರೂ. ಕೊಟ್ಟಿದ್ದೇನೆ. ಆದರೆ, ಕೆಲಸ ಮಾಡಿಕೊಡಲು ಪೂರ್ಣ ಹಣ ಕೊಡಬೇಕು ಎನ್ನುತ್ತಿದ್ದಾರೆ. ಹಣ ನೀಡದೆ ಕೇವಲ ಮನವಿ ಮಾಡಿ

» ನಾಲ್ಕನೇ ಪುಟದಲ್ಲಿ


## ಜವೇನಹಳ್ಳಿ ಮಠದ ಶ್ರೀ ಸಂಗಮೇಶ್ವರ ಸ್ವಾಮೀಜಿ ಬಣ್ಣನೆ | ನಾಗರಿಕ ವೇದಿಕೆಯಿಂದ ನುಡಿ ನಮನ

# ಶ್ರೀಮತಿ ಚನ್ನಮ್ಮ ಭಾರತೀಯ ಸಂಸ್ಕೃತಿಯ ಪ್ರತೀಕ

• ಪ್ರಜೋದಯ ವರದಿ

**ಹಾಸನ :** ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಪತ್ನಿ ಶ್ರೀಮತಿ ಚನ್ನಮ್ಮ ಅವರು ಸನಾತನ ಸಂಸ್ಕೃತಿಯ ಪ್ರತೀಕ, ಭಾರತೀಯ ಆದರ್ಶ ನಾರಿಯರ ಎಲ್ಲಾ ಸದ್ಗುಣಗಳು ಅವರಲ್ಲಿದ್ದವೆಂದು ಜವೇನಹಳ್ಳಿ ಮಠದ ಶ್ರೀ ಸಂಗಮೇಶ್ವರ ಸ್ವಾಮೀಜಿ ಅವರು ತಿಳಿಸಿದರು.

ನಗರದ ಹಾಸನಾಂಬ ಕಲಾ ಕ್ಷೇತ್ರದಲ್ಲಿ ಮಂಗಳವಾರ ಜಿಲ್ಲಾ ನಾಗರಿಕ ವೇದಿಕೆಯಿಂದ ಶ್ರೀಮತಿ ಚನ್ನಮ್ಮ ಅವರಿಗೆ ಭಾವಪೂರ್ಣ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಮೂವರು ಚನ್ನಮ್ಮ ಇದ್ದಾರೆ. ಕಿತ್ತೂರು ಚನ್ನಮ್ಮ, ಕೆಳದಿ ಚನ್ನಮ್ಮ ನಂತರ ಇವರು ಮಾತೃಶ್ರೀ ಚನ್ನಮ್ಮ ಆಗಿದ್ದಾರೆ. ಗುರುಗಳು, ಸಾಧು-ಸಂತರಿಗೆ ಗೌರವ ನೀಡುವ ಅವರ ಕರ್ತವ್ಯ ಪ್ರಜ್ಞೆ, ಅತಿಥಿ ಸತ್ಕಾರಗಳನ್ನು ಮೈಗೂಡಿಸಿಕೊಂಡು ಸದ್ಗುಣ ಆದರ್ಶ ಭಾರತೀಯ ನಾರಿಯಾಗಿ ಮಾದರಿಯಾಗಿದ್ದಾರೆ. ಸತಿ-ಪತಿಗಳು ಒಂದಾದ ಭಕ್ತಿ ಹಿತವಪ್ಪುದು ಶಿವಂಗೆ ಅನ್ನೋ ಮಾತಿನಂತೆ ಚನ್ನಮ್ಮ-ದೇವೇಗೌಡರ ದಾಂಪತ್ಯ ಹಾಲು ಸಕ್ಕರೆಯಂತೆ. ಪತಿ ಸೇವೆ ಅವರಲ್ಲಿ ಅಪಾರವಾಗಿ ಅಡಗಿತ್ತು. ಮುತ್ತೈದೆಯಾಗಿಯೇ ಇಹಲೋಕ ತ್ಯಜಿಸಿದ್ದು, ನಿಜಕ್ಕೂ ಅಪರೂಪ ಎಂದರು.





ಶ್ರೀ ವಿಜಯಕುಮಾರ ಸ್ವಾಮೀಜಿ ಅವರು ಮಾತನಾಡಿ, ಚನ್ನಮ್ಮ ಅವರ ಪೂಜಾ ಫಲದಿಂದ ಅವರ ದೇವೇಗೌಡರ ಕುಟುಂಬ ಬೆಳೆದಿದೆ. ದೇವೇಗೌಡರಿಗೆ ಬೆನ್ನೆಲುಬಾಗಿ ನಿಂತಿದ್ದಾರೆ. ಒಬ್ಬ ಆದರ್ಶ ಮಹಿಳೆ, ಮಾದರಿ ತಾಯಿಯಾಗಿ ತಮ್ಮ ಕರ್ತವ್ಯವನ್ನು ನಿಬಾಯಿಸಿದ್ದಾರೆಂದು ಹೇಳಿದರು.

ಮಾಜಿ ಸಚಿವ ಎ.ಮಂಜು ಅವರು ಮಾತನಾಡಿ, ಚನ್ನಮ್ಮ ಅವರಂತಹ ದೈವಭಕ್ತೆಯನ್ನು ನಾನೆಂದೂ ನೋಡಿಲ್ಲ. ದೇವೇಗೌಡರು ಮತ್ತು ಇಡೀ ಕುಟುಂಬ ರಾಜಕೀಯವಾಗಿ ಇಷ್ಟು ಎತ್ತರಕ್ಕೆ ಬೆಳೆಯಲು ಚನ್ನಮ್ಮ ಅವರ ಪೂಜಾ ಶಕ್ತಿ ಕಾರಣ. ದೇವೇಗೌಡರ ಕುಟುಂಬ ಒಂದು ರಾಜಕೀಯ ಪಾಠ ಶಾಲೆ ಇದ್ದ ಹಾಗೆ. ಇಲ್ಲಿ ಕಲಿತವರಿಗೆ ಶ್ರೇಯಸ್ಸು ಸಿಕ್ಕಿದೆ. ನಮ್ಮಂತಹವರಿಗೆ ಅವರ ಆಶ್ರಯ ಸಿಕ್ಕಿದ್ದು ಪುಣ್ಯದ ಸನ್ನಿವೇಶ. ಚನ್ನಮ್ಮ ಅವರನ್ನು ಭೇಟಿ ಮಾಡಿದಾಗ ಅವರು ಉಪಚರಿಸುತ್ತಿದ್ದ ರೀತಿಯನ್ನು ನೆನಪಿಸಿಕೊಂಡರು. ನನ್ನ ಮದುವೆ, ನನ್ನ ಮಗನ ಮದುವೆಗೆ ದಂಪತಿ ಆಗಮಿಸಿ, ಆಶೀರ್ವಸಿದರೆಂದು ಸ್ಮರಿಸಿದರು.

ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ಮಾತನಾಡಿ, ಚನ್ನಮ್ಮ ಅವರ ಜೀವನ ಇಂದಿನ ಯುವ ಜನರಿಗೆ ಮಾದರಿಯಾಗಿದೆ. 72 ವರ್ಷಗಳ ಕಾಲ ದಾಂಪತ್ಯ ಜೀವನ ನಡೆಸಿ ಮಾದರಿಯಾಗಿದ್ದಾರೆ. ನಾವೆಲ್ಲಾ ರಾಜಕಾರಣಿಯಾಗಿ ಬೆಳೆಯಲು ನೇರವಾಗಿ, ಪರೋಕ್ಷವಾಗಿ ಅವರು ಸಾಕಷ್ಟು ಸಹಕಾರಿಯಾಗಿದ್ದಾರೆ. ಅವರೊಬ್ಬ ವ್ಯಕ್ತಿಯಲ್ಲ, ವ್ಯಕ್ತಿತ್ವ ಹೊಂದಿದ್ದ ಆದರ್ಶ ಮಹಿಳೆ ಎಂದು ಸ್ಮರಿಸಿದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ಚನ್ನಮ್ಮ ಅವರು ನಮ್ಮ ಕುಟುಂಬಕ್ಕೆ ಮಾರ್ಗದರ್ಶಕರು. ನಮ್ಮ ಕುಟುಂಬದ ಮೇಲೆ ಆತ್ಮೀಯ ಪ್ರೀತಿ ಇಟ್ಟುಕೊಂಡಿದ್ದರು. ನಮ್ಮ ತಂದೆಯ ಅನಾರೋಗ್ಯ ವೇಳೆ ನಮಗೆ ಆತ್ಮಸ್ಥೈರ್ಯ ತುಂಬಿದ್ದರು. ನಾನು ಚುನಾವಣೆಗೆ ಸ್ಪರ್ಧಿಸುವಾಗಲೂ ಧೈರ್ಯತುಂಬಿ ಹಾರೈಸಿದ್ದಾರೆ. ದೇವೇಗೌಡರಿಗೆ ಅವರ ಅಗಲಿಕೆ ಸಹಿಸಿಕೊಳ್ಳುವ ಶಕ್ತಿಯನ್ನು ದೇವರು ಕರುಣಿಸಲಿ ಎಂದು ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಅವರು ಪ್ರಾರ್ಥಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಎಚ್.ಎಲ್.ಮಲ್ಲೇಶಗೌಡ ಅವರು ಮಾತನಾಡಿ, ಚನ್ನಮ್ಮ ಅವರು ಅನುಕೂಲಸ್ಥ ಕುಟುಂಬದಲ್ಲಿ ಹುಟ್ಟಿ, ಸಾಮಾನ್ಯ ಕುಟುಂಬ ಸೇರಿ ಆ ಕುಟುಂಬವನ್ನು ವಿಶ್ವಮಾನ್ಯ ಮಾಡಿದ ಮಹಾಮಾತೆ. ಶರಣರ ಬದುಕನ್ನು ಮರಣದಲ್ಲಿ ಕಾಣು ಅನ್ನೋ ಹಾಗೆ ಅವರ ಅಂತಿಮಯಾತ್ರೆಗೆ ಜನಸಾಗರವೇ ಹರಿದು ಬಂದಿದ್ದು ಸಾಕ್ಷಿ. ಇದು ದೇವೇಗೌಡರಿಗೆ ನಿಜಕ್ಕೂ ತೃಪ್ತಿ ತಂದಿದೆ. ಅಂತಹ ಗುಣಸಂಪನ್ನೆಯ, ಅಹಂ ಇಲ್ಲದ ಹೆಣ್ಣು ಮಗಳ ಗುಣವನ್ನು ಪ್ರತಿಯೊಬ್ಬರಿಗೂ ತಿಳಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ನುಡಿದರು.

ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥಸ್ವಾಮೀಜಿ, ಮಾಜಿ ಶಾಸಕ ಬಿ.ಆರ್.ಗುರುದೇವ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಸ್.ಎಸ್.ರಘುಗೌಡ, ಜಿಲ್ಲಾ ಜೆಡಿಎಸ್ ವಕ್ತಾರ ರಘು ಹೊಂಗೆರೆ, ದಲಿತ ಮುಖಂಡ ಕೃಷ್ಣದಾಸ್ ಮತ್ತಿತರರು ಹಾಜರಿದ್ದರು.

> ನನ್ನದು ಹೆಚ್.ಡಿ.ದೇವೇಗೌಡರದ್ದು 1947 ರಿಂದಲೂ ಪ್ರೀತಿಯ ಸಂಬಂಧವಾಗಿದೆ. ಒಕ್ಕಲಿಗರ ಸಂಘದಿಂದ ಮಹಿಳಾ ಹಾಸ್ಟೆಲ್ ಕಟ್ಟಿಸಲು ಚನ್ನಮ್ಮ ಅವರ ಸಹಕಾರವೂ ಇದೆ. ಯಾವಾಗ ಮನೆಗೆ ಭೇಟಿ ನೀಡಿದರೂ ಆತ್ಮೀಯವಾಗಿ ಸತ್ಕರಿಸುತ್ತಿದ್ದರು.
>
> -ಜಿ.ಎಲ್.ಮುದ್ದೇಗೌಡ, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ

# ಆಲೂರಿನಲ್ಲಿ ಶೇ.100ರಷ್ಟು ಜೋಳದ ಬೆಳೆ ಹಾನಿ

## ಸರ್ಕಾರಕ್ಕೆ ವರದಿ ಸಲ್ಲಿಸುವುದಾಗಿ ಭರವಸೆ ನೀಡಿದ ಜಿಲ್ಲಾಧಿಕಾರಿ ಲತಾಕುಮಾರಿ

• ಪ್ರಜೋದಯ ವರದಿ

**ಆಲೂರು:** ತಾಲ್ಲೂಕಿನಾದ್ಯಂತ ಮುಸುಕಿನ ಜೋಳ ಶೇ.100 ರಷ್ಟು ಬಿಳಿಸುಳಿ ರೋಗಕ್ಕೆ ತುತ್ತಾಗಿದ್ದು, ಸರ್ಕಾರಕ್ಕೆ ವರದಿ ಸಲ್ಲಿಸುವುದಾಗಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತಿಳಿಸಿದರು.

ತಾಲ್ಲೂಕಿನ ರಾಯಸಮುದ್ರ, ಕದಾಳು, ಕಿರಗಡಲು, ಕಬ್ಬಿನಹಳ್ಳಿ ಮತ್ತು ಸುತ್ತಮುತ್ತಲ ಹಲವು ಗ್ರಾಮಗಳಿಗೆ ಮಂಗಳವಾರ ಭೇಟಿ ನೀಡಿ, ರೋಗಕ್ಕೆ ತುತ್ತಾಗಿರುವ ಜೋಳದ ಹೊಲದಲ್ಲಿ ತಾವೇ ಖುದ್ದಾಗಿ ರೋಗಕ್ಕೆ ತುತ್ತಾಗಿರುವ ಗಿಡವನ್ನು ಕಿತ್ತು ನೋಡಿ ಪರಿಶೀಲಿಸಿದ ಬಳಿಕ ಮಾತನಾಡಿದ ಅವರು, ಕಳೆದ ವರ್ಷ ಮುಸುಕಿನ ಜೋಳ ಶೇ.10 ರಷ್ಟು ರೋಗಕ್ಕೆ ತುತ್ತಾಗಿದೆ ಎಂಬ ವರದಿ ಇತ್ತು. ಆದರೆ, ಪ್ರಸಕ್ತ ಸಾಲಿನಲ್ಲಿ ಶೇ.100 ರಷ್ಟು ರೋಗಕ್ಕೆ ತುತ್ತಾಗಿದೆ ಎಂದು ಹೇಳಿದರು.

ಹೊಲಗಳಲ್ಲಿ ಬೆಳೆದಿರುವ ಎರಡು ತಿಂಗಳ ಜೋಳವನ್ನು ಹೊರಗಡೆಯಿಂದ ನೋಡಲು ಹಸಿರಾಗಿ ಕಾಣುತ್ತದೆ. ಆದರೆ, ಹೊಲದ ಒಳಗೆ ಪ್ರವೇಶಿಸಿ ನೋಡಿದಾಗ ನಿಜ ಗೊತ್ತಾಗುತ್ತದೆ. ಶೇ.90ಕ್ಕೂ ಹೆಚ್ಚು ಗಿಡಗಳಿಗೆ ರೋಗ ತಗುಲಿರುವ ಪರಿಸ್ಥಿತಿ ಅರ್ಥವಾಗುತ್ತದೆ. ನಾನು ಈಗಾಗಲೇ ಹಾಸನದಿಂದ ಬರುವ ವೇಳೆಯಲ್ಲಿ ಹಲವು ಹೊಲಗಳಿಗೆ ಭೇಟಿ ನೀಡಿದ್ದೇನೆ ಎಂದರು.

ಮುಸುಕಿನ ಜೋಳವನ್ನು ಪ್ರಮುಖವಾಗಿ ಜಾನುವಾರುಗಳ ಮೇವಿಗಾಗಿ ಬಳಸುವುದಲ್ಲದೆ, ವಾಣಿಜ್ಯ ಬೆಳೆಯಾಗಿಯೂ ಬೆಳೆಯುತ್ತಾರೆ.



**ಕಡ್ಡಾಯವಾಗಿ ಬೆಳೆ ವಿಮೆ ಮಾಡಿಸಿ**

**ಜಿಲ್ಲೆಯಲ್ಲಿ ಶೇ.30 ರಷ್ಟು ಮಳೆ ಕೊರತೆಯಾಗಿದೆ. ರೈತರು ದಯವಿಟ್ಟು ಕೂಡಲೇ ಬೆಳೆ ವಿಮೆ ಮಾಡಿಸಬೇಕು. ಕಳೆದ ಎರಡು ವರ್ಷ ಮಳೆ ಚೆನ್ನಾಗಿ ಬಂತು. ಆದರೆ, ಈ ವರ್ಷ ಮಳೆ ಕಡಿಮೆಯಾಗಿದೆ. ರೈತರ ಹಿತಾಸಕ್ತಿ ಕಾಪಾಡುವುದು ನಮ್ಮೆಲ್ಲರ ಕರ್ತವ್ಯ. ರೈತರು ತಮ್ಮ ಕಷ್ಟಗಳನ್ನು ತಿಳಿಸಿದ್ದಾರೆ. ಕೃಷಿ ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಚರ್ಚಿಸಿ ರೈತರ ಹಿತ ಕಾಪಾಡಲು ಸೂಕ್ತ ಕ್ರಮ ಕೈಗೊಳ್ಳುತ್ತೇನೆಂದು ಜಿಲ್ಲಾಧಿಕಾರಿ ಭರವಸೆ ನೀಡಿದರು.**

ರೋಗಕ್ಕೀಡಾಗಿರುವ ಜೋಳದ ಗಿಡ ಜಾನುವಾರುಗಳಿಗೆ ಬಳಸಲೂ ಸಹ ಯೋಗ್ಯವಾಗಿಲ್ಲ. ಅದನ್ನು ಆಹಾರವಾಗಿ ಬಳಸಿದ ಜಾನುವಾರುಗಳು ರೋಗಕ್ಕೀಡಾಗುತ್ತಿದ್ದು ಹಾಲಿನ ಗುಣಮಟ್ಟ ಕ್ಷೀಣಿಸುತ್ತಿದೆಂದು ರೈತರು ಹೇಳುತ್ತಾರೆ. ಈಗಾಗಲೇ ಕೃಷಿ, ಕಂದಾಯ ಇಲಾಖೆ ಸೇರಿ ತಂಡವನ್ನು ರಚಿಸಲಾಗಿದೆ. ಹೊಲಗಳಲ್ಲಿ ಬೆಳೆದಿರುವ ಬೆಳೆಯನ್ನು ಖುದ್ದಾಗಿ ಪರಿಶೀಲನೆ ಮಾಡಿ ವರದಿ ಮಾಡಲು ಸೂಚಿಸಲಾಗಿದೆ ಎಂದು ತಿಳಿಸಿದರು.

**ಪರಿಹಾರ ಕೊಡಿಸಲು ಆಗ್ರಹ**

ಸ್ಥಳದಲ್ಲಿದ್ದ ಹತ್ತಾರು ರೈತರು ತಮ್ಮ ಹೊಲಗಳಿಗೆ ಜಿಲ್ಲಾಧಿಕಾರಿಯನ್ನು ಕರೆದು ಕೊಂಡು ಹೋಗಿ ನಷ್ಟಕ್ಕೊಳಗಾಗಿರುವ ಬೆಳೆಯನ್ನು ತೋರಿಸಿ, ಈ ಬೆಳೆಯನ್ನು ಕೊಯ್ದು ಜಾನುವಾರುಗಳಿಗೆ ಆಹಾರವಾಗಿ ನೀಡಿದರೆ ರೋಗದಿಂದ ನರಳುತ್ತವೆಂದು ತಿಳಿಸಿದರು. ಮೊದಲಿಗೆ ಬೆಳೆ ಚೆನ್ನಾಗಿ ಹುಟ್ಟಿದ್ದು, 25-30 ದಿನ ಕಳೆದ ನಂತರದಲ್ಲಿ ರೋಗಕ್ಕೆ ತುತ್ತಾಯಿತು. ನೂರು ಗಿಡ ಗಳಲ್ಲಿ ಹತ್ತು ಗಿಡ ಹಸಿರಾಗಿವೆ. 90 ಗಿಡ ರೋಗಕ್ಕೆ ತುತ್ತಾಗಿವೆ. ಡ್ರೋನ್ ಬಳಸಿ ನೋಡಿದಾಗ ಒಳಗಿನ ಪರಿಸ್ಥಿತಿ ಅರಿವಾಯಿತು. ಪರಿಹಾರ ಕೊಡಿಸಬೇಕು. ಇಲ್ಲದಿದ್ದರೆ ನಮ್ಮ ಬದುಕು ಕಷ್ಟವಾಗುತ್ತದೆಂದು ಮರುಗಿದರು.

ಈ ರೋಗವು ಗಾಳಿಯ ಮೂಲಕವೂ ಹರಡುವುದರಿಂದ ಸಮಸ್ಯೆ ವ್ಯಾಪಕವಾಗಿ ಹರಡುತ್ತಿದೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ಜಿಲ್ಲಾಧಿಕಾರಿಗೆ ಮನವರಿಕೆ ಮಾಡಿಕೊಟ್ಟರು. ತಹಶೀಲ್ದಾರ್ ಹೆಚ್.ಮಲ್ಲಿಕಾರ್ಜುನ, ಜಂಟಿ ಕೃಷಿ ನಿರ್ದೇಶಕ ರಮೇಶ್‌ಕುಮಾರ್, ಉಪ ಕೃಷಿ ನಿರ್ದೇಶಕ ಪ್ರಭಾಕರ್, ಸಹಾಯಕ ಕೃಷಿ ನಿರ್ದೇಶಕ ಎಂ.ಡಿ.ಮನು, ಕೃಷಿ ಅಧಿಕಾರಿ ಸಂಗೀತ, ಲಕ್ಷ್ಮಿ, ಗ್ರಾಮ ಲೆಕ್ಕಾಧಿಕಾರಿಗಳಾದ ಲೋಕೇಶ್, ಸಂಜೀವ್ ಸೇರಿ 50ಕ್ಕೂ ಹೆಚ್ಚು ರೈತರು ಪಾಲ್ಗೊಂಡಿದ್ದರು.

**ಬೆಳೆ ವಿಮೆ ಪಾವತಿ ಮಾಡಲು ತಾಂತ್ರಿಕ ತೊಂದರೆ, ಸರ್ವರ್‌ಡೌನ್ ಆಗಿರುವ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಿ ದಿನಾಂಕವನ್ನು ವಿಸ್ತರಣೆ ಮಾಡಲು ಪ್ರಸ್ತಾವನೆ ಸಲ್ಲಿಸಲಾಗುವುದು.**
**-ಕೆ.ಎಸ್.ಲತಾಕುಮಾರಿ, ಜಿಲ್ಲಾಧಿಕಾರಿ**

# ಅಂಬೇಡ್ಕರ್ ಪ್ರತಿಮೆ ಲೋಕಾರ್ಪಣೆಗೆ 15 ದಿನ ಗಡುವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪಟ್ಟಣದ ಮಿನಿ ವಿಧಾನಸೌಧ ಆವರಣದಲ್ಲಿ ನಿರ್ಮಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಲೋಕರ್ಪಾಣೆ ಮಾಡಬೇಕೆಂದು ಆಗ್ರಹಿಸಿ ಪ್ರಗತಿಪರ ಸಂಘಟನೆಗಳಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಪ್ರತಿಮೆ ನಿರ್ಮಾಣವಾಗಿ 9 ತಿಂಗಳು ಕಳೆದರೂ ಉದ್ಘಾಟನೆ ಕಾಲ ಕೂಡಿಬಂದಿಲ್ಲ. ಇನ್ನು 15 ದಿನಗಳ ಒಳಗೆ ಕಾರ್ಯಕ್ರಮ ಆಯೋಜಿಸದಿದ್ದರೆ ಪ್ರತಿಭಟನೆ ತೀವ್ರಗೊಳಿಸಲಾಗುವುದೆಂದು ಎಚ್ಚರಿಕೆ ನೀಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯದರ್ಶಿ ಹೆಚ್.ಎಸ್.ಮಂಜುನಾಥ್ ಅವರು ಮಾತನಾಡಿ, ತಾಲ್ಲೂಕು ಆಡಳಿತ ರಾಷ್ಟ್ರನಾಯಕನಿಗೆ ಅವಮಾನ ಮಾಡುತ್ತಿದೆ. ಆಡಳಿತದ ವೈಫಲ್ಯವನ್ನು ಜನರ ಬಳಿಗೆ ತೆಗೆದುಕೊಂಡು ಹೋಗುವುದು ಬೇಡ. ಸರ್ಕಾರದ ಶಿಷ್ಟಾಚಾರದ ಪ್ರಕಾರ ಆದಷ್ಟು ಬೇಗ ಲೋಕಾರ್ಪಣೆ ಮಾಡಿದರೆ ನಮ್ಮ ಅಭ್ಯಂತರವಿಲ್ಲ. ವಿಳಂಬ ಮಾಡಿದರೆ ತಾಲ್ಲೂಕಿನ ಹಿರಿಯ ಗಣ್ಯ ವ್ಯಕ್ತಿಯಿಂದ ಉದ್ಘಾಟನೆ ಮಾಡಿಸಲಾಗುವು ದೆಂದು ಎಚ್ಚರಿಸಿದರು.

ದಂಡೋರ ಮಂಜುನಾಥ್ ಅವರು ಮಾತನಾಡಿ, ಸಂಘಟನೆಗಳ ಇಚ್ಛಾಶಕ್ತಿಯ ಕೊರತೆ ಯಿಂದ ಈ ಪರಿಸ್ಥಿತಿ ನಿರ್ಮಾಣವಾಗಿದೆ. ಲೋಕಾರ್ಪಣೆ ಮಾಡದಿದ್ದರೆ ನಾವೇ ಪ್ರತಿಮೆ ಅನಾವರಣ ಮಾಡಬೇಕಾಗುತ್ತದೆ. ತಾಲ್ಲೂಕು ಆಡಳಿತ ನಮ್ಮನ್ನು ದೂರಬಾರದೆಂದು ಎಚ್ಚರಿಸಿದರು.

ಬಿಎಸ್‌ಪಿ ನಾಯಕ ಸೋಮಶೇಖರ್ ಅವರು ಮಾತನಾಡಿ, ವರ್ಷಗಳ ಹಿಂದೆ ಅಂಬೇಡ್ಕರ್ ಪ್ರತಿಮೆಯನ್ನು ಅನಾವರಣ ಮಾಡಬೇಕೆಂದು ದಲಿತ ಸಂಘಟನೆಗಳು ಹೋರಾಟ ಮಾಡಿದ ಪರಿಣಾಮ ತಾಲ್ಲೂಕು ಕಚೇರಿ ಮುಂದೆ ಪ್ರತಿಮೆ ಸ್ಥಾಪಿಸಲಾಗಿದೆ. ಈಗ ಲೋಕಾರ್ಪಣೆ ಮಾಡುವಂತೆಯೂ ಹೋರಾಟ ಮಾಡಬೇಕಾದ ಅನಿವಾರ್ಯ ನಿರ್ಮಾಣವಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.



**ಅಂಬೇಡ್ಕರ್ ಪ್ರತಿಮೆ ಲೋಕಾರ್ಪಣೆಗೆ ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗಿದೆ. ಇನ್ನು 4 ದಿನಗಳಲ್ಲಿ ಸಚಿವ ಸಂಪುಟ ವಿಸ್ತರಣೆಯಾಗಬಹುದು. ಜಿಲ್ಲಾ ಉಸ್ತುವಾರಿ ಸಚಿವರ ಘೋಷಣೆ ಯಾಗಿ 48 ಗಂಟೆಗಳಲ್ಲಿ ಅವರನ್ನು ಭೇಟಿಯಾಗಿ ಅಂಬೇಡ್ಕರ್ ಪ್ರತಿಮೆ ಅನಾವರಣ ಮಾಡುವ ದಿನಾಂಕ ನಿಗದಿಪಡಿಸಲಾಗುವುದು. ಉಸ್ತುವಾರಿ ಸಚಿವ ಮತ್ತು ಸಮಾಜ ಕಲ್ಯಾಣ ಇಲಾಖೆ ಸಚಿವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲು ದಲಿತ ಸಂಘಟನೆಯ ಸದಸ್ಯರನ್ನು ಬೆಂಗಳೂರಿಗೆ ಕರೆದೊಯ್ಯಲಾಗುವುದು. ಪ್ರತಿಮೆ ಲೋಕಾರ್ಪಣೆಗೆ ವಿಳಂಬ ಆಗಬಾರದೆಂಬುದು ನಮ್ಮ ಇಚ್ಛೆ. ಈ ವಿಚಾರದಲ್ಲಿ ಗೊಂದಲಗಳು ಬೇಡ.**
**-ಸಿ.ಎನ್.ಬಾಲಕೃಷ್ಣ, ಶಾಸಕ**

ಮನವಿ ಸ್ವೀಕರಿಸಿದ ತಹಶೀಲ್ದಾರ್ ಜಿ.ಎಸ್.ಶಂಕರಪ್ಪ ಅವರು ಮಾತನಾಡಿ, ಜಿಲ್ಲಾಧಿಕಾರಿಗೆ ವಿಷಯ ತಿಳಿಸಲಾಗುವುದು. ಶಿಷ್ಟಾಚಾರದ ಪ್ರಕಾರ ಎಲ್ಲರನ್ನು ಒಳಗೊಂಡಂತೆ ಕಾರ್ಯಕ್ರಮ ರೂಪಿಸಲಾಗುವುದು ಎಂದರು.

ಮುಖಂಡರಾದ ಜೆ.ಎನ್.ಚಂದ್ರಹಾಸ, ತೇಜಸ್‌ಗೌಡ, ವಾಸುದೇವ ಕಲ್ಕೆರೆ, ಸಿ.ಜಿ.ರವಿ, ರಮೇಶ್, ಶಂಕರ್, ಸತೀಶ್ ಮತ್ತಿತರರಿದ್ದರು.

## 30 ಗ್ರಾಂ ತೂಕದ ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಹಾಸನ:** ಮನೆ ಬಾಗಿಲ ಬೀಗ ಮುರಿದು ಒಳನುಗ್ಗಿರುವ ಕಳ್ಳರು 30 ಗ್ರಾಂ ತೂಕದ ಚಿನ್ನಾಭರಣ ಹಾಗು 50 ಸಾವಿರ ರೂ. ನಗದು ಕಳವು ಮಾಡಿರುವ ಘಟನೆ ನಗರದ ಎಂ. ಹೊಸಕೊಪ್ಪಲಿನಲ್ಲಿ ನಡೆದಿದೆ.

ನಿವಾಸಿ ರತ್ನ ಅವರು ಮನೆಗೆ ಬೀಗ ಹಾಕಿಕೊಂಡು ಜು.26ರಂದು ಸಂಬಂಧಿಕರ ಮನೆಗೆ ಹಬ್ಬದ ನಿಮಿತ್ತ ಅರಕಲಗೂಡು ತಾಲ್ಲೂಕಿನ ದೊಡ್ಡ ಮಗ್ಗೆಗೆ ತೆರಳಿದ್ದರು. ಮಾರನೇ ದಿನ ಬಂದಾಗ ಮನೆಯ ಮುಂಬಾಗಿಲಿನ ಬೀಗ ಹಾಗು ಡೋರ್ ಲಾಕ್ ಮುರಿದಿರುವುದು ತಿಳಿದಿದೆ. ಬಲವಾದ ಆಯುಧದಿಂದ ಬಾಗಿಲು ಮೀಟಿ ಪ್ರವೇಶಿಸಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 20 ಗ್ರಾಂ ತೂಕದ ಚಿನ್ನದ ಚೈನ್, 10 ಗ್ರಾಂ ತೂಕದ ಚಿನ್ನದ ಓಲೆ ಹಾಗು 50 ಸಾವಿರ ರೂ. ನಗದು ಕದ್ದಿದ್ದಾರೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಲ್ಯಾಣ ಮಂಟಪದ ಕೇಬಲ್ ಕಳವು

• ಪ್ರಜೋದಯ ವರದಿ

**ಹಾಸನ:** ನಗರದ ಬಿ.ಎಂ.ರಸ್ತೆಯಲ್ಲಿರುವ ಜ್ಞಾನಾಕ್ಷಿ ಕಲ್ಯಾಣ ಮಂಟಪದಲ್ಲಿ 5 ಹೆಚ್.ಪಿ. ಮೋಟಾರ್ ಹಾಗು 50 ಮೀಟರ್ ಕೇಬಲ್ ಕಳವು ಮಾಡಿರುವ ಘಟನೆ ನಡೆದಿದೆ.

ಜು.26ರ ರಾತ್ರಿ ಕಳ್ಳತನವಾಗಿದ್ದು ಕಳುವಾಗಿರುವ ವಸ್ತುಗಳ ಒಟ್ಟು ಮೌಲ್ಯ 60 ಸಾವಿರ ರೂ. ಆಗಿದೆ ಈ ಸಂಬಂಧ ಪದ್ಮಾಂಭ ಅವರು ಬಡಾವಣೆ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ.

## ರಥೋತ್ಸವ ನೂಕುನುಗ್ಗಲಿನಲ್ಲಿ ಚಿನ್ನದ ಸರ ಕಳವು

• ಪ್ರಜೋದಯ ವರದಿ

**ಅರಸೀಕೆರೆ:** ಜಾತ್ರೆಯ ನೂಕುನುಗ್ಗಲಿನಲ್ಲಿ ಆಯತಪ್ಪಿ ಕೆಳಗೆ ಬಿದ್ದ ಮಹಿಳೆಯ ಕೊರಳಿಂದ 50 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ ದೋಚಿರುವ ಘಟನೆ ಮಾಲೇಕಲ್ ತಿರುಪತಿ ಶ್ರೀ ಲಕ್ಷ್ಮೀ ವೆಂಕಟರಮಣ ಸ್ವಾಮಿ ರಥೋತ್ಸವದಲ್ಲಿ ನಡೆದಿದೆ. ತಿಪಟೂರು ತಾಲ್ಲೂಕು ಸಾರತವಳ್ಳಿ ಗ್ರಾಮದ ಮರುಳಸಿದ್ದಮ್ಮ ಹಾಗು ಪತಿ ರಾಮಲಿಂಗಪ್ಪ ದೇವರ ರಥೋತ್ಸವಕ್ಕೆ ಬಂದಿದ್ದರು. ಜನ ಜಂಗುಳಿಯಲ್ಲಿ ಕೆಳಗೆ ಬಿದ್ದಾಗ ಯಾರೋ ಕೊರಳಿಗೆ ಕೈ ಹಾಕಿ ಸರ ಕಿತ್ತುಕೊಂಡಿದ್ದಾರೆ. ಅವರನ್ನು ಪತ್ತೆ ಹಚ್ಚಲು ಸಾಧ್ಯವಾಗಿಲ್ಲವೆಂದು ಮಹಿಳೆ ಗ್ರಾಮಾಂತರ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ.

# ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಎಚ್ಚರ ವಹಿಸಿ

• ಪ್ರಜೋದಯ ವರದಿ

**ಸಕಲೇಶಪುರ:** ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಸೂಚನೆ ನೀಡಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ನಡೆದ ತಾಲ್ಲೂಕು ಟಾಸ್ಕ್ ಫೋರ್ಸ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ವರ್ಷ ಆರಂಭದಲ್ಲಿ ಮಳೆ ಕೊರತೆಯಿಂದ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಆತಂಕ ವಿತ್ತು. ಕಳೆದ ಒಂದು ವಾರದಿಂದ ಉತ್ತಮ ಮಳೆಯಾಗಿರುವುದರಿಂದ ಬಹುತೇಕ ಸಮಸ್ಯೆ ನಿವಾರಣೆಯಾಗುವ ನಿರೀಕ್ಷೆಯಿದ್ದರೂ ನೀರಿಗೆ ಅಭಾವವಾಗದಂತೆ ಮುನ್ನೆಚ್ಚರಿಕೆ ವಹಿಸಬೇಕೆಂದರು.

ಮೋಟಾರ್ ದೋಷ, ವಿದ್ಯುತ್ ಸಂಪರ್ಕದ ಸಮಸ್ಯೆ, ವಿದ್ಯುತ್ ಪರಿವರ್ತಕ (ಟಿಸಿ) ಸಮಸ್ಯೆ, ಕೊಳವೆ ಬಾವಿಗಳಲ್ಲಿ ನೀರಿನ ಕೊರತೆ ಅಥವಾ ಪೈಪ್ ಲೈನ್ ದೋಷ ಸೇರಿ ಇನ್ನಿತರ ಕಾರಣದಿಂದ ಸಮಸ್ಯೆ ಇದ್ದರೂ ತಕ್ಷಣ ಪರಿಹರಿಸಬೇಕೆಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಲ್ ಜೀವನ್ ಮಿಷನ್ ಯೋಜನೆಯಡಿ ಬಾಕಿ ಉಳಿದಿರುವ ಮನೆಗಳಿಗೆ ನೀರು ಸಂಪರ್ಕ ಕಾಮಗಾರಿಗಳ ಮಾಹಿತಿಯನ್ನೂ ಸಂಗ್ರಹಿಸಿ ಶೀಘ್ರ ಪೂರ್ಣಗೊಳಿಸುವಂತೆ ಸೂಚಿಸಿದರು.

**ಡೀಮ್ಡ್ ಫಾರೆಸ್ಟ್ ವರದಿಗೆ ಸೂಚನೆ**

ತಾಲ್ಲೂಕಿನ ಹಲವು ಭಾಗಗಳಲ್ಲಿ ಆಸ್ಪತ್ರೆ, ಶಾಲೆ, ಅಂಗನವಾಡಿ, ಸ್ಮಶಾನ ಹಾಗು ವಸತಿ ಪ್ರದೇಶಗಳು ಡೀಮ್ಡ್ ಫಾರೆಸ್ಟ್ ವ್ಯಾಪ್ತಿಗೆ ಸೇರಿರುವ ಕಾರಣ ಸಾರ್ವಜನಿಕರು ಸಂಕಷ್ಟ ಅನುಭವಿಸುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ಅವಕಾಶವನ್ನು ಬಳಸಿಕೊಂಡು ನೈಜ ಮಾಹಿತಿಯೊಂದಿಗೆ ವರದಿ ಸಲ್ಲಿಸುವಂತೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದರು.

ಕಂದಾಯ ಹಾಗು ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿ ನೈಜ ವರದಿ ಸಲ್ಲಿಸಿದರೆ ಅದನ್ನು ತಾಲ್ಲೂಕು ಹಾಗು ಜಿಲ್ಲಾ ಸಮಿತಿಗಳ ಮೂಲಕ ಸರ್ಕಾರಕ್ಕೆ ಕಳುಹಿಸಿ ಸಮಸ್ಯೆ ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದೆಂದರು.

**ಮಳೆಗಾಲದಲ್ಲಿ ವಿದ್ಯುತ್ ದೂರುಗಳಿಗೆ ತ್ವರಿತ ಸ್ಪಂದನೆ**

ಮಳೆಗಾಲದಲ್ಲಿ ವಿದ್ಯುತ್ ವ್ಯತ್ಯಯಗಳು ಹೆಚ್ಚಾಗುವ ಹಿನ್ನಲೆಯಲ್ಲಿ ಜೆಇ, ಎಇ ಸೇರಿ ವಿದ್ಯುತ್ ಇಲಾಖೆಯ ಅಧಿಕಾರಿಗಳು ಸಾರ್ವಜನಿಕರ ದೂರವಾಣಿ ಕರೆಗಳಿಗೆ ತಕ್ಷಣ ಸ್ಪಂದಿಸಬೇಕು. ಕರೆ ಸ್ವೀಕರಿಸಲು ಸಾಧ್ಯವಾಗದಿದ್ದರೆ ಅರ್ಧ ಗಂಟೆಯೊಳಗೆ ಮರು ಕರೆ ಮಾಡಿ ಸಮಸ್ಯೆಯ ಮಾಹಿತಿ ಪಡೆದು ತ್ವರಿತವಾಗಿ ಪರಿಹಾರ ಕಲ್ಪಿಸಬೇಕೆಂದು ಸೂಚಿಸಿದರು.

**ಸ್ಥಳಕ್ಕೆ ಭೇಟಿ ನೀಡಿ ವಾಸ್ತವ ಅರಿಯಿರಿ**

ಕುಡಿಯುವ ನೀರು, ವಿದ್ಯುತ್ ಸೇರಿ ಸಾರ್ವಜನಿಕ ಮೂಲಸೌಕರ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಅಧಿಕಾರಿಗಳು ಕಚೇರಿಯಲ್ಲಿ ಕುಳಿತುಕೊಳ್ಳದೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಪರಿಹರಿಸಬೇಕು. ಗ್ರಾಮ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಜನರ ಸಮಸ್ಯೆಗಳನ್ನು ನೇರವಾಗಿ ಅರಿತು ಕ್ರಮ ಕೈಗೊಳ್ಳಬೇಕೆಂದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಂಗಾಧರನ್, ಆಲೂರು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸುಬ್ರಹ್ಮಣ್ಯ, ಹಾಸನ ತಾಲ್ಲೂಕು ಪಂಚಾಯಿತಿ. ಕಾರ್ಯನಿರ್ವಹಣಾಧಿಕಾರಿ ಗಿರೀಶ್, ಸೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರ ವೆಂಕಟೇಶ್, ಹರೀಶ್, ಆದಿತ್ಯ ಇತರರಿದ್ದರು.



## ಟಿಸಿ ಸರ್ವಿಸ್ ಲೈನ್ ಅಳವಡಿಕೆಗೂ ಲಂಚದ ಆರೋಪ

» ಮೊದಲನೇ ಪುಟದಿಂದ

ಕೊಂಡರೆ ಸರ್ಕಾರದ ಅನುಮತಿಬೇಕು, ಹೊಸ ಕಂಬಹಾಕಬೇಕು. ಅದಕ್ಕೆಲ್ಲಾ ತುಂಬಾ ತಡವಾಗುತ್ತದೆಂದು ಉದ್ಧಟತನದ ಹೇಳಿಕೆ ನೀಡುತ್ತಿದ್ದಾರೆಂದರು.

ಕೈಗೆ ಬಂದ ಬೆಳೆ ಹಾನಿಗೀಡಾಗುವ ಆತಂಕ ಕಾಡುತ್ತಿದೆ. ಬೆಳೆ ಉಳಿವಿಗೆ ಅವಕಾಶ ಮಾಡಿಕೊಡಿ. ಇಲ್ಲವಾದರೆ ವಿಷ ಕುಡಿದು ಸಾಯುತ್ತೇನೆ. ಬೆಳೆಗೆ 80 ಸಾವಿರ ರೂ. ಸಾಲ ಮಾಡಿದ್ದೇನೆ. ಸಾಲಗಾರರು ದಿನಾ ಮನೆಗೆ ಬರುತ್ತಿದ್ದಾರೆ. ಹೆಂಡತಿ ಕಿವಿಯೊಲೆ ಬಿಡಿಸಿಕೊಳ್ಳಬೇಕೆಂದರೆ ಜಮೀನಿಗೆ ನೀರು ಬೇಕೆಂದು ಅವರು ಅಳಲು ತೋಡಿಕೊಂಡರು.

**ಸಂಸದ ಶ್ರೇಯಸ್ ಸೂಚನೆಗೂ ಬೆಲೆ ಇಲ್ಲ**

ರೈತ ಶ್ರೀನಿವಾಸ್ ಅವರು ಯಾರದೋ ಸಂಪರ್ಕ ಸಾಧಿಸಿ ಸಂಸದ ಶ್ರೇಯಸ್ ಪಟೇಲ್ ಅವರನ್ನು ಭೇಟಿಯಾಗಿ ಸಮಸ್ಯೆ ಹೇಳಿಕೊಂಡಿದ್ದರು. ಸಂಸದರ ಸೂಚನೆ ಮೇರೆಗೆ ಸೋಮವಾರ ಗ್ರಾಮಕ್ಕೆ ತೆರಳಿದ್ದ ಸೆಸ್ಕಾಂ ಅಧಿಕಾರಿ ಹಾಗು ಸಿಬ್ಬಂದಿ ಈ ವೇಳೆಯೂ ಸಹ ರೈತನ ಮೇಲೆ ದಬ್ಬಾಳಿಕೆ ನಡೆಸಿದ್ದಾರೆ ಎನ್ನಲಾಗಿದೆ. ಸಂಸದರಿಗೆ ಹೇಳಿದ ಮಾತ್ರಕ್ಕೆ ಕೆಲಸ ಆಗುವುದಿಲ್ಲ. ಬಾಕಿ ಹಣ ನೀಡಲೇಬೇಕು, ಇಲ್ಲವಾದರೆ ಯಾವ ಕೆಲಸವೂ ಆಗುವುದಿಲ್ಲ ಎಂದಿದ್ದಾರೆಂದು ತಿಳಿದು ಬಂದಿದೆ.

**ರೈತನ ಆರೋಪ ನಿರಾಧಾರ ಎಂದ ಜೆಇ**

ಈ ಕುರಿತು ಸೆಸ್ಕಾಂ ಮೊಸಳೆಹೊಸಹಳ್ಳಿ ವಿಭಾಗ ಜೆಇ ಆರ್.ಸತೀಶ್ ಅವರು ಮಾತನಾಡಿ, ಕೇವಲ ಒಬ್ಬ ರೈತರಿಗೆ ಟಿಸಿ ದುಡ್ಡು ಕೇಳುವುದಿಲ್ಲ. ಮೊದಲಿದ್ದ ಟಿಸಿ ಓವರ್‌ಲೋಡ್ ಆಗಿದ್ದರಿಂದ ಹೊಸ ಟಿಸಿ ಹಾಕಿದ್ದೇವೆ. ಮೂರು ತಿಂಗಳ ಹಿಂದೆ ತಮ್ಮ ಜಮೀನಿನಲ್ಲಿ ಲೈನ್ ಎಳೆಯಲು ರೈತ ಶ್ರೀನಿವಾಸ್ ಬಿಡಲಿಲ್ಲ. ಆ ಜಮೀನಿನ ರೈತರು ಜಂಪ್ ಹಾಕಲು ಬಿಡುತ್ತಿಲ್ಲ. ಟಿಸಿ ಚಾರ್ಜ್ ಮಾಡಬೇಕೆಂದರೆ ಹಳೆಯ ವಿದ್ಯುತ್ ಕಂಬ ತೆಗೆದು ಹಾಕಿ ಬೇರೆಡೆ ಅಳವಡಿಸಬೇಕಾಗುತ್ತದೆಂದರು. ರೈತ ಶ್ರೀನಿವಾಸ್ ಅವರಿಂದ ನಾನು ಹಣಕ್ಕೆ ಬೇಡಿಕೆ ಇಟ್ಟಿಲ್ಲ. ನನ್ನ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಲಾಗುತ್ತಿದೆ. ಇವರ ಜಮೀನಿಗೆ ಪ್ರತ್ಯೇಕ ಲೈನ್ ಎಳೆಯಬೇಕಿದ್ದು, ಅದನ್ನು ಕೂಡಲೇ ಮಾಡಲಾಗುತ್ತದೆ. ಆದರೆ ತಾಳ್ಮೆ ವಹಿಸದ ಶ್ರೀನಿವಾಸ್ ಅವರು ನನ್ನ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆಂದು ಸ್ಪಷ್ಟಪಡಿಸಿದರು.

## ನಾಳೆ ಚನ್ನಮ್ಮನವರ ಉತ್ತರ ಕ್ರಿಯಾದಿ ಕ್ರಿಯೆ

» ಮೊದಲನೇ ಪುಟದಿಂದ

ಹೋಗುವವರಿಗೆ ಹೆದ್ದಾರಿ ಎದುರು, ಎಡಭಾಗ, ಹರಿಹರಪುರ ಕಡೆಯಿಂದ ಬರುವವರಿಗೆ ಮೊರಾರ್ಜಿ ವಸತಿ ಶಾಲೆ ಸುತ್ತಮುತ್ತ, ನೀರಿನ ಟ್ಯಾಂಕ್ ಪಕ್ಕ, ಹೆಲಿಪ್ಯಾಡ್ ಕೆಳಗೆ, ಹರದನಹಳ್ಳಿ ಸರ್ಕಾರಿ ಸಂಯುಕ್ತ ಶಾಲೆ ಮೊದಲಾದ ಹತ್ತಕ್ಕೂ ಕಡೆಗಳಲ್ಲಿ ಪಾರ್ಕಿಂಗ್ ಸ್ಥಳ ಗೊತ್ತು ಮಾಡಲಾಗಿದೆ.

ಕಾರ್ಯಕ್ರಮ ಸ್ಥಳದ ಒಂದು ಕಿಮೀ ಸುತ್ತಳತೆಯಲ್ಲಿ ಗೌಡರ ಕುಟುಂಬದವರ ವಾಹನ ಹೊರತು ಪಡಿಸಿ ಯಾವುದೇ ಖಾಸಗಿ ವಾಹನ ಒಳ ಬರುವಂತಿಲ್ಲ. ಜನರನ್ನು ಕರೆದೊಯ್ಯಲು ಸುಮಾರು 16 ವಾಹನ ವ್ಯವಸ್ಥೆ ಮಾಡಲಾಗಿದೆ. ಭದ್ರತೆಗಾಗಿ 750ಕ್ಕೂ ಹೆಚ್ಚು ಮಂದಿಯನ್ನು ನಿಯೋಜನೆ ಮಾಡಲಾಗಿದೆ.

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಸ್ಥಳದಲ್ಲೇ ಮೊಕ್ಕಾಂ ಹೂಡಿ ಊಟದ ವ್ಯವಸ್ಥೆ ಸೇರಿ ಇತರೆ ಸೌಕರ್ಯಗಳ ಬಗ್ಗೆ ತಾವೇ ಖುದ್ದು ಎಲ್ಲಾ ಕೆಲಸ ಮಾಡಿಸುತ್ತಿದ್ದಾರೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಹೆಚ್.ಡಿ. ಕುಮಾರಸ್ವಾಮಿ ಅವರು ಹಲವು ಬಾರಿ ಭೇಟಿ ನೀಡಿ ಸಿದ್ಧತಾ ಕಾರ್ಯ ಮೇಲ್ವಿಚಾರಣೆ ನಡೆಸಿದ್ದಾರೆ. ಮಂಗಳವಾರ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದರು. ಶಾಸಕ ಹೆಚ್.ಪಿ.ಸ್ವರೂಪ್, ವಿಧಾನಪರಿಷತ್‌ಸದಸ್ಯ ಬೋಜೇಗೌಡ ಇದ್ದರು.

## ಮಕ್ಕಳ ಜ್ಞಾನ ಸನಾತನ ಪರಂಪರೆಯೊಂದಿಗೆ ಬೆಸೆಯಲಿ

» ಮೊದಲನೇ ಪುಟದಿಂದ

ಪಠ್ಯ ಶಿಕ್ಷಣವು ಜ್ಞಾನವನ್ನು ನೀಡಿದರೆ, ಮನೆಯಲ್ಲಿ ಸಂಸ್ಕಾರದ ಶಿಕ್ಷಣವು ಮಗುವಿನ ವ್ಯಕ್ತಿತ್ವ ರೂಪಿಸುತ್ತದೆ. ಸಂಸ್ಕಾರಯುತ ಶಿಕ್ಷಣವು ಮಗುವಿನ ನಡವಳಿಕೆ, ಮೌಲ್ಯಗಳು ಮತ್ತು ಸಾಮಾಜಿಕ ಕೌಶಲ್ಯಗಳನ್ನು ರೂಪಿಸುತ್ತದೆಂದು ತಿಳಿಸಿದರು.

ಪಾಲಕರು ತಮ್ಮ ಮಕ್ಕಳೊಂದಿಗೆ ಉತ್ತಮ ನಡವಳಿಕೆ, ಸಭ್ಯತೆ, ಗೌರವ ಮತ್ತು ಇತರ ಮೌಲ್ಯಗಳನ್ನು ಹಂಚಿಕೊಳ್ಳಬೇಕು. ಇದು ಮಗುವಿಗೆ ಜೀವನದುದ್ದಕ್ಕೂ ಸಹಾಯ ಮಾಡುತ್ತದೆ. ನಮ್ಮ ಮಕ್ಕಳಲ್ಲಿ ಸಂಸ್ಕಾರ ಬೆಳೆಸಬೇಕಾಗಿದೆ. ಅದಕ್ಕೆ ಪಾಲಕರು ಸಂಸ್ಕೃತಿ ಪಾಲನೆ ಮಾಡುವುದು ಅಗತ್ಯವಾಗಿದೆ. ಪಾಲಕರು ತಮ್ಮ ಮಕ್ಕಳನ್ನು ಅಕ್ಷರಾಭ್ಯಾಸ ಮಾಡಿಸಿ ಉತ್ತಮ ಪ್ರಜೆಯಾಗಬೇಕೆಂಬ ಆಸೆ ಹೊಂದಿರುತ್ತಾರೆ. ಕೇವಲ ಶಾಲೆಗೆ ಕಳುಹಿಸಿದ ಮಾತ್ರಕ್ಕೆ ಪಾಲಕರ ಪಾತ್ರ ಮುಗಿಯುವುದಿಲ್ಲ. ತಂದೆ-ತಾಯಿಯೇ ಮಕ್ಕಳಿಗೆ ಮೊದಲ ಗುರು. ಪಾಲಕರು ಮಕ್ಕಳ ಚಟುವಟಿಕೆ ಬಗ್ಗೆ ಪ್ರತಿದಿನ ಗಮನಹರಿಸಬೇಕು. ಮಕ್ಕಳು ಶಾಲೆಯಲ್ಲಿ ಗುರುಗಳು ಹೇಳಿದ್ದನ್ನು ಕೇಳುವುದಕ್ಕಿಂತ ಹೆಚ್ಚಾಗಿ ಪೋಷಕರನ್ನು ಅನುಕರಣೆ ಮಾಡಿ ಕಲಿಯುವುದು ಹೆಚ್ಚು ಹಾಗಾಗಿ ಪ್ರತಿಯೊಬ್ಬ ಪೋಷಕರು ಮಕ್ಕಳ ಮುಂದೆ ಸಂಸ್ಕಾರಯುತವಾಗಿ ನಡೆದುಕೊಳ್ಳಬೇಕು. ಯಾವುದೇ ಕಾರಣಕ್ಕೂ ಮಕ್ಕಳ ಮುಂದೆ ಜಗಳ ವಾಡಬಾರದೆಂದು ಕಿವಿಮಾತು ಹೇಳಿದರು.

ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಸರಸ್ವತಿ ಪೂಜೆ ಸಲ್ಲಿಸಿದ ಪಾಲಕರು ನಂತರ ತಮ್ಮ ಪುಟ್ಟ ಮಕ್ಕಳ ಜೊತೆ ಕುಳಿತು ಪೂಜೆ ಸಲ್ಲಿಸಿದ ತಟ್ಟೆಯಲ್ಲಿದ್ದ ಅಕ್ಕಿಯಲ್ಲಿ ಓಂಕಾರ ಬರೆಯುವ ಮೂಲಕ ಅಕ್ಷರಾಭ್ಯಾಸ ನಡೆಸಿದರು. ನಂತರ ಪ್ರಸಾದ ವಿನಿಯೋಗ ಮಾಡಲಾಯಿತು.

ಶ್ರೀ ಆದಿಚುಂಚನಗಿರಿ ಶಾಖಾ ಮಠದ ಕಾರ್ಯದರ್ಶಿ ಶ್ರೀ ಶಂಭುನಾಥ ಸ್ವಾಮೀಜಿ, ಕಬ್ಬಳಿ ಬಿಜಿಎಸ್ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕ ತಿಮ್ಮೇಗೌಡ, ಅಣತಿ ಬಿಜಿಎಸ್ ಶಾಲೆಯ ಮುಖ್ಯ ಶಿಕ್ಷಕಿ ಭಾರತಿ, ಚನ್ನರಾಯಪಟ್ಟಣ ಬಿಜಿಎಸ್ ಶಾಲೆಯ ಪ್ರಾಂಶುಪಾಲ ಸಿ.ಸಿ.ಕುಮಾರ್ ಇತರರಿದ್ದರು.

# ಕಾಡಾನೆ ದಾಳಿ: ಗಾಯಾಳು ಆರೋಗ್ಯ ವಿಚಾರಿಸಿದ ಶಾಸಕ

• ಪ್ರಜೋದಯ ವರದಿ

**ಹಾಸನ:** ಕಾಡಾನೆ ದಾಳಿಯಿಂದ ಗಾಯಗೊಂಡು ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೈತನ ಆರೋಗ್ಯವನ್ನು ಶಾಸಕ ಸಿಮೆಂಟ್ ಮಂಜು ಅವರು ಮಂಗಳವಾರ ಆಸ್ಪತ್ರೆಗೆ ಭೇಟಿ ನೀಡಿ ವಿಚಾರಿಸಿದರು.

ಸಕಲೇಶಪುರ ತಾಲ್ಲೂಕಿನ ಶಾಂತಪುರ ಗ್ರಾಮದ ರೈತ ಮಲ್ಲೇಶ್ ಅವರು ದನ ಮೇಯಿಸಿ ಕೊಂಡು ಮನೆಗೆ ಮರಳುತ್ತಿದ್ದ ವೇಳೆ ಕಾಡಾನೆ ದಾಳಿಗೆ ಒಳಗಾಗಿ ಗಾಯಗೊಂಡ ಅವರನ್ನು ನಗರದ ಜನಪ್ರಿಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹೀಗಾಗಿ ಆಸ್ಪತ್ರೆಗೆ ಭೇಟಿ ನೀಡಿದ ಶಾಸಕ, ಚಿಕಿತ್ಸೆ ಪಡೆಯುತ್ತಿರುವ ಮಲ್ಲೇಶ್ ಅವರ ಆರೋಗ್ಯ ಸ್ಥಿತಿ ಕುರಿತು ವೈದ್ಯರಿಂದ ಸಂಪೂರ್ಣ ಮಾಹಿತಿ ಪಡೆದು, ಅಗತ್ಯವಿರುವ ಎಲ್ಲಾ ಚಿಕಿತ್ಸೆಯನ್ನು ತ್ವರಿತವಾಗಿ ಹಾಗು ಸಮರ್ಪಕವಾಗಿ ಒದಗಿಸುವಂತೆ ವೈದ್ಯಾಧಿಕಾರಿಗಳಿಗೆ ಸೂಚನೆ ನೀಡಿದರು. ಬಳಿಕ ಕುಟುಂಬ ಸದಸ್ಯರನ್ನು ಭೇಟಿ ಮಾಡಿ ಧೈರ್ಯ ತುಂಬಿದ ಅವರು, ಸರ್ಕಾರದಿಂದ ದೊರೆಯುವ ಪರಿಹಾರ ಹಾಗು ಅಗತ್ಯ ನೆರವನ್ನು ಶೀಘ್ರ ಕಲ್ಪಿಸುವ ಭರವಸೆ ನೀಡಿದರು.

ಬಳಿಕ ಮಾತನಾಡಿದ ಅವರು, ಸಕಲೇಶಪುರ ಭಾಗದಲ್ಲಿ ಮಾನವ-ಆನೆ ಸಂಘರ್ಷ ದಿನದಿಂದ ದಿನಕ್ಕೆ ಗಂಭೀರ ಸ್ವರೂಪ ಪಡೆಯುತ್ತಿದ್ದು, ರೈತರು ಹಾಗೂ ಗ್ರಾಮೀಣ ಜನರು ಭಯದಲ್ಲಿ ಬದುಕುವಂತಾಗಿದೆ. ಅಮೂಲ್ಯವಾದ ಮಾನವ ಜೀವ ಕಾಪಾಡುವುದರ ಜೊತೆಗೆ ಎಲ್ಲರ ಬದುಕು ಸುರಕ್ಷಿತವಾಗಿರಲು ಶಾಶ್ವತ ಹಾಗು ವೈಜ್ಞಾನಿಕ ಪರಿಹಾರ ಕ್ರಮಗಳನ್ನು ಸರ್ಕಾರ ಆದ್ಯತೆಯಾಗಿ ಕೈಗೊಳ್ಳಬೇಕಿದೆ ಎಂದರು.



ನಿಖರವಾಗಿ ಆನೆಗಳ ಚಲನವಲನ ಪತ್ತೆಹಚ್ಚಿ ಗ್ರಾಮಸ್ಥರಿಗೆ ಮುನ್ನೆಚ್ಚರಿಕೆ ನೀಡುವ ಉದ್ದೇಶ ದಿಂದ ಕಾಡಾನೆಗಳಿಗೆ ರೇಡಿಯೊ ಕಾಲರ್ ಅಳವಡಿಸುವ ಕಾರ್ಯವನ್ನು ತ್ವರಿತವಾಗಿ ಆರಂಭಿಸು ವಂತೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಸಿಎಫ್) ಅವರಿಗೆ ಸೂಚನೆ ನೀಡಿರುವುದಾಗಿ ತಿಳಿಸಿದ ಅವರು, ಆಧುನಿಕ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಮಾನವ -ಆನೆ ಸಂಘರ್ಷ ಕಡಿಮೆ ಮಾಡಲು ಅರಣ್ಯ ಇಲಾಖೆ ಸಮಗ್ರ ಕಾರ್ಯಯೋಜನೆ ರೂಪಿಸ ಬೇಕೆಂದು ಒತ್ತಾಯಿಸಿದರು.

ಜನರ ಸುರಕ್ಷತೆ ಜೊತೆಗೆ ವನ್ಯಜೀವಿಗಳ ಸಂರಕ್ಷಣೆಯೂ ಅಷ್ಟೇ ಮುಖ್ಯ. ಎರಡನ್ನೂ ಸಮತೋಲನದಲ್ಲಿಟ್ಟುಕೊಂಡು ಅರಣ್ಯ ಇಲಾಖೆ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕೆಂದರು. ವಲಯ ಅರಣ್ಯಾಧಿಕಾರಿ ಹೇಮಂತ್ ಕುಮಾರ್, ವೈದ್ಯಾಧಿಕಾರಿಗಳು, ಆಸ್ಪತ್ರೆ ಮುಖ್ಯಸ್ಥ ಡಾ. ಅಬ್ದುಲ್ ಬಶೀರ್ ಇದ್ದರು.

## ಸಿ.ಟಿ.ರವಿ ಪ್ರಚೋದನಕಾರಿ ಹೇಳಿಕೆಗೆ ಆಕ್ರೋಶ

• ಪ್ರಜೋದಯ ವರದಿ

**ಹಾಸನ:** ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ದೆಹಲಿಯಲ್ಲಿ ನಡೆದ ಹೋರಾಟ ಖಂಡಿಸಿ ಚಿಕ್ಕಮಗಳೂರಿನಲ್ಲಿ ನಡೆದ ಪ್ರತಿಭಟನಾ ಭಾಷಣದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ಮುಸ್ಲಿಂ ಸಮುದಾಯದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವುದು ಖಂಡನೀಯ ಎಂದು ಯಂಗ್ ಇಂಡಿಯಾ ಯೂತ್ ಆರ್ಗನೈಸೇಷನ್ ರಾಜ್ಯಾಧ್ಯಕ್ಷ ಮೆಹರಾಜ್ ಪಾಷ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ನೀಟ್ ಪರೀಕ್ಷೆಗೂ ಮುಲ್ಲಾನಿಗೂ ಏನು ಸಂಬಂಧವೆಂದು ಸಿ.ಟಿ.ರವಿ ಪ್ರಶ್ನಿಸುವ ಮೂಲಕ ಸಮುದಾಯಕ್ಕೆ ಅವಹೇಳನ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಯಾವುದೇ ವ್ಯಕ್ತಿ ಅಥವಾ ಜನಪ್ರತಿನಿಧಿಗಳು ಈ ರೀತಿಯ ಪ್ರಚೋದನಾಕಾರಿ ಹಾಗು ಅವಹೇಳನಕಾರಿ ಹೇಳಿಕೆ ನೀಡಿದರೆ ಹೋರಾಟ ಹಮ್ಮಿಕೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು.

ಈ ರೀತಿಯ ಹೇಳಿಕೆ ನೀಡುವ ಮೊದಲು ಯೋಚಿಸಬೇಕು. ನೀಟ್ ಪರೀಕ್ಷೆಗೂ ಮುಲ್ಲಾ ಗಳಿಗೂ ಏನ್ ಸಂಬಂಧ, ಅವರ ಎದೆ ಸೀಳಿದರೆ ಮೂರು ಅಕ್ಷರ ಇಲ್ಲ ಎಂದು ಹೇಳುವ ಮೂಲಕ ಇಡೀ ನಮ್ಮ ಸಮುದಾಯಕ್ಕೆ ಧಕ್ಕೆ ತರುವ ಮಾತುಗಳನ್ನು ಆಡಬಾರದು. ಇಂತಹ ಹೇಳಿಕೆಗಳಿಂದ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಜೊತೆಗೆ ಸಮಾಜದಲ್ಲಿ ಅಶಾಂತಿ ನಿರ್ಮಾಣವಾಗುತ್ತದೆ. ಬಿಹಾರದಲ್ಲಿ ನಡೆದ ಘಟನೆಯೊಂದರ ಹಳೆಯ ವಿಡಿಯೋ ತೆಗೆದುಕೊಂಡು ಇದು ಜಂತರ್ ಮಂತರ್‌ನಲ್ಲಿ ನಡೆದ ಘಟನೆ ವಿಡಿಯೋ ಎಂದು ತೋರಿಸಿ ತಪ್ಪು ಮಾಹಿತಿ ಮೂಲಕ ಸಮಾಜದಲ್ಲಿ ಗೊಂದಲ ಮತ್ತು ಕೋಮು ಸೌಹಾರ್ದ ಹಾಳು ಮಾಡುವ ಹುನ್ನಾರ ನಡೆದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಸಲೀಂ ಮಲ್ಲಿಕ್, ಸಾಹಿದ್, ವಾಹಿದ್ ಇದ್ದರು.




## ಜನಸಂಖ್ಯೆಗೆ ಅನುಗುಣವಾಗಿ ಮೂಲಸೌಕರ್ಯ ಅತ್ಯಗತ್ಯ

» ಮೊದಲನೇ ಪುಟದಿಂದ

ಭೂಸ್ವಾಧೀನಪಡಿಸಿಕೊಂಡಿದ್ದ ಮಳಲಿ ಬೈಪಾಸ್‌ನಿಂದ ತೇಜಸ್ವಿ ವೃತ್ತಕ್ಕೆ ಸಂಪರ್ಕಿಸುವ ರಸ್ತೆಯ ಸಾಧ್ಯತೆಯನ್ನು ಪರಿಶೀಲಿಸುವಂತೆ ಉಪವಿಭಾಗಾಧಿಕಾರಿಗೆ ನಿರ್ದೇಶನ ನೀಡಲಾಗಿದೆ. ಭೂಮಿ ಲಭ್ಯವಿದ್ದರೆ ರಸ್ತೆ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

**ಫುಡ್ ಕೋರ್ಟ್‌ಗೆ ಪರ್ಯಾಯ ಕ್ರಮ**

ಹಳೆ ಬಸ್ ನಿಲ್ದಾಣದ ಎದುರು ನಿರ್ಮಾಣ ಹಂತದಲ್ಲಿರುವ ಬಸ್ ತಂಗುದಾಣದ ದಾಖಲೆಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಎಸ್‌ಬಿಐ ವೃತ್ತದ ಸಮೀಪ ನಿರ್ಮಿಸಲು ಉದ್ದೇಶಿಸಿರುವ ಫುಡ್ ಕೋರ್ಟ್ ಸ್ಥಳದಲ್ಲಿ ಈಗಾಗಲೇ ವಾಹನ ದಟ್ಟಣೆ ಹೆಚ್ಚಿರುವುದರಿಂದ, ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಪರ್ಯಾಯ ಸ್ಥಳ ಗುರುತಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದೆಂದರು.

ಸುಭಾಷ್ ಕ್ರೀಡಾಂಗಣದ ಸಮೀಪದ ಲೆಗಸಿ ತ್ಯಾಜ್ಯ ವಿಲೇವಾರಿ ಪ್ರದೇಶವನ್ನು ಪರಿಶೀಲಿಸಿದ ಅವರು, ಮಳೆಗಾಲದ ನಡುವೆಯೂ ಎರಡು ತಿಂಗಳೊಳಗೆ ತ್ಯಾಜ್ಯವನ್ನು ತೆರವುಗೊಳಿಸಿ ನಗರವನ್ನು ಸ್ವಚ್ಛವಾಗಿಡುವಂತೆ ಸಂಬಂಧಿತ ಅಧಿಕಾರಿಗಳಿಗೆ ಸೂಚಿಸಿದರು.

ಹಳೆ ಹಾಗು ಹೊಸ ಬಸ್ ನಿಲ್ದಾಣಗಳಲ್ಲಿ ವಿದ್ಯಾರ್ಥಿನಿಯರಿಗೆ ಕಿರುಕುಳ ನೀಡುತ್ತಿರುವ ಕುರಿತು ದೂರುಗಳು ಬಂದಿರುವ ಹಿನ್ನಲೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಮಹಿಳೆ ಯರು ಹಾಗು ವಿದ್ಯಾರ್ಥಿನಿಯರು ಯಾವುದೇ ತೊಂದರೆ ಎದುರಾದಲ್ಲಿ ತಕ್ಷಣ ಪೊಲೀಸ್ ಇಲಾಖೆ ಅಥವಾ ಮಕ್ಕಳ ಸಹಾಯವಾಣಿ 1098ಕ್ಕೆ ಮಾಹಿತಿ ನೀಡುವಂತೆ ಮನವಿ ಮಾಡಿದರು.

**ಕೋಟೆ ಅಭಿವೃದ್ಧಿಗೆ ಡಿಪಿಆರ್**

ಮಂಜರಾಬಾದ್ ಕೋಟೆ ಅಭಿವೃದ್ಧಿ ಕಾಮಗಾರಿಗೆ ಕೇಂದ್ರ ಪುರಾತತ್ವ ಇಲಾಖೆ ಈಗಾಗಲೇ ಅಂದಾಜು ಕ್ರಿಯಾ ವರದಿ ಸಿದ್ಧಪಡಿಸಿ ಕಾಮಗಾರಿ ಆರಂಭಿಸಿದ್ದು, ಮಳೆಗಾಲದಿಂದ ಕಾಮಗಾರಿ ಪ್ರಗತಿ ನಿಧಾನಗೊಂಡಿರಬಹುದು. ಕೋಟೆ ಸಮೀಪ ಪ್ರವಾಸಿಗರ ವಾಹನ ನಿಲುಗಡೆ ವ್ಯವಸ್ಥೆ ಕಲ್ಪಿಸುವ ಕುರಿತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದೊಂದಿಗೆ ಚರ್ಚೆ ನಡೆಸಲಾಗಿದೆ ಎಂದು ತಿಳಿಸಿದರು.

ಖಾಸಗಿ ಜಮೀನಿನಲ್ಲಿ ವಾಹನ ಸಾಹಸ ನಡೆಸುತ್ತಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಪ್ರವಾಸಿಗರ ಸುರಕ್ಷತೆ ಸರ್ಕಾರದ ಮೊದಲ ಆದ್ಯತೆಯಾಗಿದ್ದು, ಪ್ರವಾಸೋದ್ಯಮ ಇಲಾಖೆಯ ಸಭೆ ಕರೆದು ಅಗತ್ಯ ಮಾರ್ಗಸೂಚಿಗಳನ್ನು ರೂಪಿಸಲಾಗುವುದೆಂದರು.

ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ, ತಹಶೀಲ್ದಾರ್ ಸುಪ್ರೀತಾ, ಪುರಸಭೆ ಮುಖ್ಯಾಧಿಕಾರಿ ಮಹೇಶ್ವರಪ್ಪ, ಯೋಜನಾಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಯ್ಯದ್ ಮುಫೀಜ್ ಇತರರಿದ್ದರು.

## ವಿಚಾರಣಾಧೀನ ಖೈದಿ ಸಾವು : ಕುಟುಂಬಸ್ಥರ ಅನುಮಾನ

» ಮೊದಲನೇ ಪುಟದಿಂದ

ಮತ್ತೊಂದು ಪ್ರಕರಣದಲ್ಲಿ ಯಾವುದೇ ಸಂಬಂಧವಿಲ್ಲದಿದ್ದರೂ ತಮ್ಮ ಮಗನ ಹೆಸರನ್ನು ಸೇರಿಸಿ ಪ್ರಕರಣ ದಾಖಲಿಸಲಾಗಿದೆ ಎಂದು ಪೋಷಕರು ಆರೋಪಿಸಿದ್ದಾರೆ.

ನ್ಯಾಯಾಲಯಕ್ಕೆ ಹಾಜರಾಗದ ಹಿನ್ನಲೆ ವಾರೆಂಟ್ ಜಾರಿಯಾಗಿದ್ದು, ಕಳೆದ ಒಂದು ತಿಂಗಳಿನಿಂದ ನಗರದ ಸಂತೇಪೇಟೆಯಲ್ಲಿರುವ ಜಿಲ್ಲಾ ಉಪಕಾರಾಗೃಹದಲ್ಲಿ ವಿಶ್ವನಾಥ್ ಬಂಧನದಲ್ಲಿದ್ದ. ಭಾನುವಾರ ಜೈಲಿನಲ್ಲೇ ವಿಶ್ವನಾಥ್ ವಾಂತಿ ಮಾಡಿಕೊಂಡಿದ್ದು, ಜೈಲಿನ ವೈದ್ಯರು ಪ್ರಾಥಮಿಕ ಚಿಕಿತ್ಸೆ ನೀಡಿ ಬಳಿಕ ಹೆಚ್ಚಿನ ಚಿಕಿತ್ಸೆಗೆ ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದರು. ಆದರೆ, ಆಸ್ಪತ್ರೆಗೆ ದಾಖಲಿಸಿದ ದಿನವೇ ಕುಟುಂಬ ಸದಸ್ಯರಿಗೆ ಮಾಹಿತಿ ನೀಡದೇ, ಮರುದಿನ ಜೈಲು ಅಧಿಕಾರಿಗಳು ಮಾಹಿತಿ ನೀಡಿದರೆಂದು ಪೋಷಕರು ಆರೋಪಿಸಿದ್ದಾರೆ.

ಜಿಲ್ಲಾಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಕೋಮಾ ಸ್ಥಿತಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವಿಶ್ವನಾಥ್ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ವಿಶ್ವನಾಥ್ ಸಾವಿನ ಕುರಿತು ಅನುಮಾನ ವ್ಯಕ್ತಪಡಿಸಿರುವ ಪೋಷಕರು, ಅಧಿಕಾರಿಗಳ ನಿರ್ಲಕ್ಷ್ಯ ಹಾಗು ಸೂಕ್ತ ಸಮಯದಲ್ಲಿ ಸಮರ್ಪಕ ಚಿಕಿತ್ಸೆ ನೀಡದ ಕಾರಣವೇ ತಮ್ಮ ಮಗ ಮೃತಪಟ್ಟಿದ್ದಾನೆಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಘಟನೆಯ ಮಾಹಿತಿ ತಿಳಿದು ಜೈಲು ಅಧಿಕಾರಿಗಳು ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

**ರಥೋತ್ಸವ ಖರ್ಚು ವೆಚ್ಚ ಮಂಡನಾ ಸಭೆಯಲ್ಲಿ ಶಾಸಕ ಸಿಮೆಂಟ್ ಮಂಜು**

# ಜಾತ್ರೆಯ ಯಶಸ್ಸಿಗೆ 30.95 ಲ.ರೂ. ಉಳಿಕೆಯೇ ಸಾಕ್ಷಿ

• ಪ್ರಜೋದಯ ವರದಿ

**ಸಕಲೇಶಪುರ:** ಸಕಲೇಶ್ವರ ಸ್ವಾಮಿ ಜಾತ್ರಾ ಮಹೋತ್ಸವವನ್ನು ಪಾರದರ್ಶಕತೆ, ಶಿಸ್ತು ಮತ್ತು ಸೇವಾಭಾವದಿಂದ ಆಯೋಜಿಸಿರುವುದಕ್ಕೆ ಈ ಬಾರಿ 30,95,508 ಉಳಿಕೆ ಹಣವೇ ಸಾಕ್ಷಿ ಯಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಮಂಗಳವಾರ ಪಟ್ಟಣದ ಸಕಲೇಶ್ವರ ಸ್ವಾಮಿ ಆವರಣದಲ್ಲಿ ಆಯೋಜಿಸಲಾಗಿದೆ 2026ನೇ ಸಾಲಿನ ಸಕಲೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಮತ್ತು ರಥೋತ್ಸವ ಕಾರ್ಯಕ್ರಮ ಜಮಾ, ಖರ್ಚು ಮಂಡನಾ ಸಭೆಯಲ್ಲಿ ಮಾತನಾಡಿದ ಅವರು, ಸಕಲೇಶ್ವರ ಸ್ವಾಮಿ ಈ ಭಾಗದ ಆರಾಧ್ಯ ದೈವವಾಗಿದ್ದು ಸಕಲೇಶಪುರ ಎಂಬ ಹೆಸರಿಗೂ ಸ್ವಾಮಿಯ ಹೆಸರೇ ಕಾರಣವಾಗಿದೆ. ಈ ಭಾಗದ ಜನರ ಬದುಕು, ಭಕ್ತಿ ಮತ್ತು ಸಂಸ್ಕೃತಿ ಸ್ವಾಮಿಯ ಆಶೀರ್ವಾದದೊಂದಿಗೆ ಬೆಸೆದುಕೊಂಡಿದೆ ಎಂದು ಹೇಳಿದರು.

ಜಾತ್ರೆಯನ್ನು ದೇವಸ್ಥಾನ ಸಮಿತಿಯೇ ನಡೆಸಬೇಕೆಂಬ ಸಾರ್ವಜನಿಕರ ಬಹುಕಾಲದ ಆಶಯವನ್ನು ಸಮಿತಿ ಸಾಕಾರಗೊಳಿಸಿದೆ. ಪುರಸಭೆಯಲ್ಲಿ ಸೂಕ್ತ ಜಾಗದ ಕೊರತೆ ಇದ್ದರೂ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ದೇವಸ್ಥಾನ ಸಮಿತಿಯೇ ಜಾಗವನ್ನು ಒಪ್ಪಂದದ ಮೂಲಕ ಪಡೆದು ವಸ್ತು ಪ್ರದರ್ಶನವನ್ನು ಯಶಸ್ವಿಯಾಗಿ ಆಯೋಜಿಸಿದೆ ಎಂದು ತಿಳಿಸಿದರು.

ನಾನು ಶಾಸಕನಾದ ನಂತರ ನಡೆದ ಮೂರು ಜಾತ್ರೆಗಳಲ್ಲೂ ಸಮಿತಿ ಅತ್ಯುತ್ತಮ ಆರ್ಥಿಕ ಶಿಸ್ತು ಪ್ರದರ್ಶಿಸಿದೆ. ಮೊದಲ ವರ್ಷ ಸುಮಾರು 16 ಲಕ್ಷ, ಎರಡನೇ ವರ್ಷ 18 ಲಕ್ಷ ಹಾಗೂ ಈ ಬಾರಿ ಎಲ್ಲಾ ವೆಚ್ಚಗಳನ್ನು ಭರಿಸಿದ ಬಳಿಕವೂ ದಾಖಲೆಯ 30,95,508 ಹಣ ಉಳಿದಿದೆ. ಯಾವುದೇ ಪ್ರತಿಫಲದ ನಿರೀಕ್ಷೆಯಿಲ್ಲದೆ ದುಡಿದ ಸಮಿತಿ ಸದಸ್ಯರ ತಂಡದ ಕಾರ್ಯ, ಪ್ರಾಮಾಣಿಕತೆ ಮತ್ತು ಪಾರದರ್ಶಕ ಆಡಳಿತದಿಂದಲೇ ಈ ಸಾಧನೆ ಸಾಧ್ಯವಾಗಿದೆ. ಇದು ಸಾಮಾನ್ಯ ಸಾಧನೆಯಲ್ಲ ಸಾರ್ವಜನಿಕರ ಹಣವನ್ನು ಜವಾಬ್ದಾರಿಯಿಂದ ನಿರ್ವಹಿಸಿದ ಅತ್ಯುತ್ತಮ ಮಾದರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಾತ್ರೆಯ ಉದ್ದೇಶ ಕೇವಲ ಆದಾಯ ಗಳಿಸುವುದಲ್ಲ, ಸಮಾಜದ ಎಲ್ಲಾ ವರ್ಗದ ಜನರು ಸಂಭ್ರಮಿಸುವಂತಾಗಬೇಕೆಂಬುದು. ಬಡ ಕುಟುಂಬಗಳ ಮಕ್ಕಳು ವರ್ಷಕ್ಕೊಮ್ಮೆ ಜಾತ್ರೆಗೆ ಬಂದು ಸಂತೋಷದಿಂದ ಆಟವಾಡುವ ಅವಕಾಶ ಕಳೆದುಕೊಳ್ಳಬಾರದೆಂಬ ಉದ್ದೇಶದಿಂದ ಅಮ್ಯೂಸ್‌ಮೆಂಟ್ ಆಟಗಳ ದರವನ್ನು ಕೈಗೆಟುಕುವ ಮಟ್ಟದಲ್ಲೇ ನಿಗದಿಪಡಿಸಲಾಗಿದೆ. ಅದರಿಂದ ಸಾವಿರಾರು ಮಕ್ಕಳು ಮತ್ತು ಕುಟುಂಬಗಳು ಕಡಿಮೆ ವೆಚ್ಚದಲ್ಲಿ ಜಾತ್ರೆಯ ಸಂಭ್ರಮ ವನ್ನು ಅನುಭವಿಸಲು ಸಾಧ್ಯವಾಗಿದೆ ಎಂದು ಹೇಳಿದರು.

ಪ್ರತಿ ವರ್ಷ ತಾಲ್ಲೂಕಿನ ವಿವಿಧ ಗ್ರಾಮಗಳ ಜೊತೆಗೆ ಹೊರ ಊರುಗಳಲ್ಲಿ ನೆಲೆಸಿರುವ ಕುಟುಂಬಗಳೂ ಜಾತ್ರೆಯ ನಿಮಿತ್ತ ತವರಿಗೆ ಆಗಮಿಸುತ್ತಾರೆ. ವರ್ಗದ ಜನರು ವಸ್ತು ಪ್ರದರ್ಶನ ಹಾಗೂ ಮನ ರಂಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸು ವಂತ ವಾತಾವರಣ ನಿರ್ಮಿಸಿರುವುದು ದೇವಸ್ಥಾನ ಸಮಿತಿಯ ಸಾಮಾಜಿಕ ಬದ್ಧತೆಯ ಪ್ರತೀಕವಾಗಿದೆ ಎಂದರು.

ತಹಶೀಲ್ದಾರ್ ಸುಪ್ರಿತಾ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಂಗಾಧರನ್, ಪುರಸಭಾ ಮುಖ್ಯಾಧಿಕಾರಿ ಮಹೇಶ್ವರಪ್ಪ, ಸಕಲೇಶ್ವರ ಸ್ವಾಮಿ ಭಕ್ತ ಮಂಡಳಿ ಅಧ್ಯಕ್ಷ ಬ್ಯಾಕರವಳ್ಳಿ ಜಯಣ್ಣ, ಉತ್ಸವ ಸಮಿತಿ ಕಾರ್ಯದರ್ಶಿ ಅವಿನಾಶ್, ಖಜಾಂಚಿ ಮೋಹನ್, ಮಾಜಿ ಸಂಚಾಲಕ ನಂದಿ ಕೃಪಾ ದೇವರಾಜು, ವ್ಯವಸ್ಥಾಪನ ಸಮಿತಿ ಮಾಜಿ ಅಧ್ಯಕ್ಷ ಮಹೇಶ್, ದೇವಸ್ಥಾನ ಸಮಿತಿ ಪದಾಧಿಕಾರಿಗಳು, ಸದಸ್ಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK